## ಅಧ್ಯಾಯ ೧

# ಪ್ರಾಸ್ತಾವಿಕ

**ಪೀಠಿಕೆ :** 'ಟಿ.ನರಸೀಪುರ'[1] ಎಂದೇ ಚಿರಪರಿಚಿತವಿರುವ 'ತಿರುಮಕೂಡಲು ನರಸೀಪುರ' ತಾಲೂಕು, ಕರ್ನಾಟಕ ರಾಜ್ಯದ ದಕ್ಷಿಣ ತುದಿಯಲ್ಲಿರುವ ಮೈಸೂರು ಜಿಲ್ಲೆಯ ಏಳು ತಾಲೂಕುಗಳಲ್ಲಿ ಒಂದು. ಜಿಲ್ಲೆಯ ಪೂರ್ವ ಭಾಗದಲ್ಲಿ ವ್ಯಾಪಿಸಿರುವ ಈ ತಾಲೂಕು, ಜಿಲ್ಲೆಗೆ ಈಶಾನ್ಯ ಗಡಿಯೂ ಆಗಿದೆ. ಈ ತಾಲೂಕನ್ನು ೧೮೬೮ರವರೆಗೆ ತಲಕಾಡು ತಾಲೂಕೆಂದೇ ಕರೆಯಲಾಗುತ್ತಿದ್ದು, ಅದೇ ವರ್ಷ ತಿ.ನರಸೀಪುರವನ್ನು ತಾಲೂಕು ಕೇಂದ್ರವೆಂದು ಪರಿಗಣಿಸಲಾಯಿತು. ಮುಂದೆ ೧೮೮೨ರಲ್ಲಿ ತಾಲೂಕಿನ ಹೆಸರನ್ನೂ ತಿರುಮಕೂಡಲು ನರಸೀಪುರ ಎಂದೇ ಮಾರ್ಪಡಿಸಲಾಯಿತು. ತತ್ಪರಿಣಾಮವಾಗಿ, ಕಾವೇರಿ–ಕಪಿಲ (ಕಬಿನಿ) ನದಿಗಳ ಸಂಗಮ ಸ್ಥಳದಿಂದಾಗಿ ಆ ವೇಳೆಗಾಗಲೇ ಧಾರ್ಮಿಕ ಮಹತ್ವವನ್ನು ಹೊಂದಿದ್ದ ತಿ.ನರಸೀಪುರವು ಆಡಳಿತಾತ್ಮಕ ಮಹತ್ವವನ್ನೂ ಪಡೆಯಿತು. ಮುಂದೆ ೧೯೩೯ರಲ್ಲಿ ಮೈಸೂರು ಜಿಲ್ಲೆಯನ್ನು ವಿಭಜಿಸಿ ಮಂಡ್ಯ ಜಿಲ್ಲೆ ಹಾಗೂ ೧೯೯೭ರಲ್ಲಿ ಚಾಮರಾಜನಗರ ಜಿಲ್ಲೆಗಳು ಅಸ್ತಿತ್ವಕ್ಕೆ ಬಂದ ಮೇಲೂ ತಿ.ನರಸೀಪುರ ತಾಲೂಕು ಮೈಸೂರು ಜಿಲ್ಲೆಯ ಭಾಗವಾಗಿಯೇ ಮುಂದುವರಿದಿದೆ.

ಸುಮಾರು ೪೯೯.೨೧ ಚ.ಕಿ.ಮೀ.ಗಳಷ್ಟು ಭೌಗೋಳಿಕ ವಿಸ್ತೀರ್ಣವನ್ನು ಹೊಂದಿರುವ ಇದು ಜಿಲ್ಲೆಯ ಅತ್ಯಂತ ಚಿಕ್ಕ ತಾಲೂಕಾಗಿದೆ. ಒಡಗಲ್ ರಂಗನಾಥ ಬೆಟ್ಟ, ಮುಡುಕುತೊರೆಬೆಟ್ಟ ಮುಂತಾದ ಬೆಟ್ಟಗಳಿದ್ದರೂ ತಾಲೂಕಿನ ಹೆಚ್ಚಿನ ಭಾಗ ಬಯಲು ಪ್ರದೇಶದಿಂದ ಕೂಡಿದೆ. ಜಿಲ್ಲೆಯಲ್ಲಿ ತಿರುಮಕೂಡಲು, ಬೆನಕನಹಳ್ಳಿ, ಹೆಮ್ಮಿಗೆ ಮುಂತಾದವು ಇತಿಹಾಸ ಪೂರ್ವಕಾಲದ ಮಾನವನ ವಸತಿ ನೆಲೆಗಳಾಗಿದ್ದು, ನಾಡಿನ ಇತಿಹಾಸ ಪೂರ್ವಕಾಲದ ನಕಾಶೆಯಲ್ಲಿ ತಾಲೂಕಿಗೆ ವಿಶಿಷ್ಟ ಸ್ಥಾನವಿದೆ. ತಾಲೂಕಿನ ಆರ್ಥಿಕ ಬದುಕನ್ನು ರೂಪಿಸುವಲ್ಲಿ, ಕಾವೇರಿ ಹಾಗೂ ಅದರ ಉಪನದಿಗಳು ಪ್ರಾಚೀನ ಕಾಲದಿಂದಲೂ ಮಹತ್ವದ ಪಾತ್ರವನ್ನು ವಹಿಸಿಕೊಂಡು ಬಂದಿದ್ದು, ನೀರಾವರಿ

---

1. 'ತಿರುಮಕೂಡಲು ನರಸೀಪುರ'ಕ್ಕೆ ಬದಲಾಗಿ 'ತಿ. ನರಸೀಪುರ' ಎಂಬ ರೂಪವನ್ನು ಅಲ್ಲಲ್ಲಿ ಬಳಸಲಾಗಿದೆ.

ಸೌಕರ್ಯವನ್ನೂ ಕಲ್ಪಿಸಿವೆ. ಸುಮಾರು ಏಳು ಶತಮಾನಗಳ ಕಾಲ ಆಡಳಿತ ನಡೆಸಿದ ಗಂಗರಸರ ರಾಜಧಾನಿ ಪಟ್ಟಣವಾಗಿದ್ದ ತಲಕಾಡು; ಚೋಳರ ಕಾಲದ ದೇವಾಲಯವಿರುವ ತಡಿಮಾಲಂಗಿ; ಹೊಯ್ಸಳರ ಕಾಲದ ವಿಶ್ವವಿಖ್ಯಾತ ದೇವಾಲಯಗಳಿರುವ ಸೋಮನಾಥಪುರ; ಮುಂತಾದ ಚಾರಿತ್ರಿಕ ಮಹತ್ವದ ಸ್ಥಳಗಳು ಈ ತಾಲೂಕಿನಲ್ಲಿವೆ. ಮಧ್ವಸಿದ್ಧಾಂತದ ಪ್ರಚಾರಕರಲ್ಲಿ ಒಬ್ಬರಾದ ವ್ಯಾಸರಾಜತೀರ್ಥರು ಬನ್ನೂರಿನವರು. ಈ ತಾಲೂಕು ರೇವಣಾರಾಧ್ಯ ಮುಂತಾದ ಧಾರ್ಮಿಕ ಚಿಂತಕರ ಬೀಡಾಗಿದ್ದು, ರಂಗಭೂಮಿ–ನಾಟಕ, ಸಾಹಿತ್ಯಕ್ಷೇತ್ರಕ್ಕೆ ಅಮೋಘ ಸೇವೆ ಸಲ್ಲಿಸಿದ ಅಯ್ಯಶಾಸ್ತ್ರಿಗಳು ಸೋಸಲೆಯವರು. ಭರತನಾಟ್ಯ ಪ್ರವೀಣೆ, ಆಸ್ಥಾನ ನರ್ತಕಿ ಸುಂದರಮ್ಮಣ್ಣಿ ಹಾಗೂ ಅವರ ಪುತ್ರರಾದ ಶ್ರೇಷ್ಠ ಪಿಟೀಲುವಾದಕ ಚೌಡಯ್ಯನವರೂ ತಿರುಮಕೂಡಲಿನವರೆಂಬುದು ತಾಲೂಕಿಗೇ ಕಳಶಪ್ರಾಯವಾಗಿದೆ.

ತಾಲೂಕಿನಲ್ಲಿ ೧೯೦೧–೭೦ರವರೆಗಿನ ಅವಧಿಯಲ್ಲಿ ಸರಾಸರಿ ೭೧೮ ಮಿ.ಮೀ. ವಾರ್ಷಿಕ ವಾಡಿಕೆ ಮಳೆಯಾಗುತ್ತಿದ್ದು, ಜಿಲ್ಲಾ ಸರಾಸರಿ ಮಳೆ ಪ್ರಮಾಣ (೭೮೨ ಮಿ.ಮೀ)ಕ್ಕಿಂತ ಕಡಿಮೆ ಇದೆ. ತಾಲೂಕಿನ ಹವಾಗುಣವು ವರ್ಷದುದ್ದಕ್ಕೂ ಹಿತಕರವಾಗಿದ್ದು, ಭೂಕಂಪನಮುಕ್ತ ಪ್ರದೇಶವೆಂದೇ ಸಾಮಾನ್ಯವಾಗಿ ಪರಿಗಣಿಸಲಾಗಿದೆ. ಅರಣ್ಯ ಸಂಪನ್ಮೂಲದ ದೃಷ್ಟಿಯಿಂದ ಮೈಸೂರು ಜಿಲ್ಲೆಯು ರಾಜ್ಯಮಟ್ಟದಲ್ಲಿ ಎರಡನೆಯ ಸ್ಥಾನದಲ್ಲಿದ್ದರೂ ತಾಲೂಕಿನಲ್ಲಿರುವ ಅರಣ್ಯ ಪ್ರಮಾಣವು ನಗಣ್ಯವೇ. ಕಾವೇರಿ–ಕಪಿಲ ನದಿಗಳಿಂದಾಗಿ ತಾಲೂಕಿನಲ್ಲಿ ಬತ್ತ, ಕಬ್ಬು ಪ್ರಮುಖ ಬೆಳೆಗಳಾಗಿದ್ದು, ರಾಗಿ, ಜೋಳ, ಹತ್ತಿಯನ್ನೂ ಬೆಳೆಯಲಾಗುತ್ತದೆ. ತೋಟಗಾರಿಕೆಯೂ ಸಾಕಷ್ಟು ಪ್ರಧಾನವಾಗಿದೆ. ತಾಲೂಕಿನ ಪಶುಸಂಪನ್ಮೂಲವೂ ಸಮೃದ್ಧವಾಗಿದ್ದು, ಹೈನುಗಾರಿಕೆ, ಕೋಳಿಸಾಕಣೆ, ಮೀನುಗಾರಿಕೆಯಂತಹ ಉದ್ಯಮಗಳೂ ಪರಿಣಾಮಕಾರಿಯಾಗಿ ಬೆಳೆದಿವೆ. ತಾಲೂಕಿನಲ್ಲಿ ಅಕ್ಕಿಗಿರಣಿಗಳು ಅಧಿಕ ಸಂಖ್ಯೆಯಲ್ಲಿದ್ದು, ಇಟ್ಟಿಗೆ ತಯಾರಿಕೆ, ಹೆಂಚು ಉತ್ಪಾದನೆ, ಬಿದಿರು ಉದ್ಯಮ, ಕೈಮಗ್ಗ, ಕುಂಬಾರಿಕೆ, ಅಗರಬತ್ತಿ, ರೇಷ್ಮೆ ಮುಂತಾದ ಉದ್ಯಮಗಳೂ ಇವೆ. ರೇಷ್ಮೆಹುಳು ಸಾಕಣೆ, ತಾಲೂಕಿನ ಪ್ರಮುಖ ಗೃಹಕೈಗಾರಿಕೆಗಳಲ್ಲಿ ಒಂದಾಗಿದ್ದು, ರೇಷ್ಮೆ ಉದ್ಯಮದಲ್ಲಿ ಈ ತಾಲೂಕು ಐದನೆಯ ಸ್ಥಾನದಲ್ಲಿದೆ. ಈ ತಾಲೂಕು ಕೈಗಾರಿಕಾದೃಷ್ಟಿಯಿಂದ ಅತೀ ಹಿಂದುಳಿದಿರುವ (ಕೈಗಾರಿಕಾ ವಲಯ–I) ಪ್ರದೇಶಗಳ ಗುಂಪಿನಲ್ಲಿದ್ದು, ಕೈಗಾರಿಕಾಭಿವೃದ್ಧಿಗೆ ಹೇರಳ ಅವಕಾಶವಿದೆ. ತಾಲೂಕಿನಲ್ಲಿ ವಾಣಿಜ್ಯ ಬ್ಯಾಂಕಿಂಗ್ ಚಟುವಟಿಕೆಯು ಬಹಳ ತಡವಾಗಿ (೧೯೫೧) ಆರಂಭಗೊಂಡರೂ, ೨೦೦೬ರ ಅಂತ್ಯಕ್ಕೆ ತಾಲೂಕಿನಲ್ಲಿ ಮೈಸೂರು ಬ್ಯಾಂಕ್, ಭಾರತೀಯ ಸ್ಟೇಟ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಇಂಡಿಯನ್ ಓವರಸೀಸ್ ಬ್ಯಾಂಕ್, ವಿಜಯಾ ಬ್ಯಾಂಕ್ ಮುಂತಾದ ವಾಣಿಜ್ಯ ಬ್ಯಾಂಕುಗಳಿಗೆ ಸೇರಿದ ಶಾಖೆಗಳು; ಹಾಗೂ ಕಾವೇರಿ ಗ್ರಾಮೀಣ ಬ್ಯಾಂಕ್ ಸೇರಿದಂತೆ ಇತರ ಕೃಷಿ ಸಹಕಾರ ಬ್ಯಾಂಕ್‌ಗಳೂ ಕ್ರಿಯಾಶೀಲವಾಗಿವೆ. ವಾಣಿಜ್ಯ ರಂಗದಲ್ಲೂ ತಾಲೂಕು ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ತಾಲೂಕಿನ ಸಾರಿಗೆ–ಸಂಪರ್ಕ ವ್ಯವಸ್ಥೆಯೂ ಗಣನೀಯ ಪ್ರಮಾಣದಲ್ಲಿ ಸುಧಾರಿಸಿದ್ದು, ರಾಷ್ಟ್ರೀಯ



ಹೆದ್ದಾರಿ ೨೧೨ ತಾಲೂಕಿನ ಮೂಲಕ ಹಾದುಹೋಗಿದೆ. ಅಂಚೆ–ತಂತಿ ದೂರವಾಣಿ ಸೇವೆಯಲ್ಲೂ, ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಗಮನಾರ್ಹ ಪ್ರಗತಿಯಾಗಿದೆ. ತಾಲೂಕಿನಲ್ಲಿರುವೆರಡು ಪಟ್ಟಣಪಂಚಾಯಿತಿ ಹಾಗೂ ೩೬ ಗ್ರಾಮಪಂಚಾಯಿತಿಗಳು, ಸ್ಥಳೀಯ ಸ್ವಯಂ ಆಡಳಿತ ಘಟಕಗಳಾಗಿ ಪ್ರಾದೇಶಿಕ ಅಭಿವೃದ್ಧಿಯಲ್ಲಿ ತೊಡಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಘಟಕಗಳು ಆರಂಭಗೊಳ್ಳುವ ಮೂಲಕ ವೈದ್ಯಕೀಯ ಸೇವೆಯು ಉತ್ತಮಗೊಳ್ಳುವಂತಾಗಿದೆ. ತಾಲೂಕಿನಾದ್ಯಂತ ಕಾವೇರಿ–ಕಪಿಲ ಹೊಳೆ ಸಾಲಿನುದ್ದಕ್ಕೂ ಮರಳು ಸಮೃದ್ಧವಾಗಿ ಲಭಿಸುತ್ತಿದ್ದು, ಮರಳ ಸಾಗಾಣಿಕೆಗೆ ಸರ್ಕಾರ ಈಗಾಗಲೇ ನಿರ್ಬಂಧ ವಿಧಿಸಿದೆ. ಕರುಣ ಟ್ರಸ್ಟ್‌ನಂತಹ ಸಾಮಾಜಿಕ ಸಂಘಟನೆಗಳು ಗ್ರಾಮೀಣಾಭಿವೃದ್ಧಿಯಲ್ಲಿ ತೊಡಗಿವೆ. ತಲಕಾಡಿನ ಹಸ್ತಿಕೇರಿಮಠ, ಸೋಸಲೆಯ ವ್ಯಾಸರಾಯಮಠ ಹಾಗೂ ತೋಪಿನಮಠ, ಮುಡುಕುತೊರೆಯ ಮಹಾಂತಸ್ವಾಮಿಮಠ, ತಿರುಮಕೂಡಲಿನ ಆದಿಚುಂಚನಗಿರಿ ಶಾಖಾಮಠ ಹಾಗೂ ವ್ಯಾಸರಾಯ ಮಠದ ಶಾಖೆಯೂ ಇವೆ. ತಲಕಾಡಿನಲ್ಲಿ ೧೨ ವರ್ಷಗಳಿಗೊಮ್ಮೆ ನಡೆಯುವ ಪಂಚಲಿಂಗದರ್ಶನ, ತಿರುಮಕೂಡಲಿನಲ್ಲಿ ಮೂರು ವರ್ಷಗಳಿಗೊಮ್ಮೆ ಜರುಗುವ ಕುಂಭಮೇಳ; ಹೇಮಾದ್ರಮ್ಮ (ಬನ್ನೂರು), ತ್ರಿಪುರಾಂಬ (ಮೂಗೂರು), ಪಾರ್ವತಿ–ಮಲ್ಲಿಕಾರ್ಜುನ (ಮುಡುಕುತೊರೆ)ರ ವಾರ್ಷಿಕ ಜಾತ್ರೆ ಮುಂತಾದವುಗಳಿಂದಾಗಿ ಈ ತಾಲೂಕು ಆಸಕ್ತರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಹೀಗೆ ವೈವಿಧ್ಯತೆಗಳ ಆಗರವಾಗಿರುವ ಈ ತಾಲೂಕನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

**ಹೆಸರಿನ ಮೂಲ :** ರಾಜ್ಯದ ಬಹುಪಾಲು ತಾಲೂಕುಗಳಂತೆ ಇದೂ ಕೂಡ ತಾಲೂಕು ಕೇಂದ್ರದ ಹೆಸರಿನಿಂದಲೇ ಕರೆಯಲ್ಪಡುತ್ತಿದೆ. ಆದರೆ ದಕ್ಷಿಣಕಾಶಿ, ವಾರಣಾಸಿ, ದಕ್ಷಿಣ ಪ್ರಯಾಗ ರುದ್ರಪಾದಭೂಮಿ ಎಂದೆಲ್ಲಾ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ಇದು, ಕಾವೇರಿ–ಕಪಿಲ ನದಿಗಳ ಸಂಗಮ ಸ್ಥಳದಲ್ಲಿರುವುದರಿಂದ 'ತಿರುಮಕೂಡಲು' (ತಮಿಳಿನಲ್ಲಿ ತಿರು ಎಂದರೆ ಶ್ರೀ ಎಂದರ್ಥ) ಎಂಬ ಹೆಸರು ಬಳಕೆಗೆ ಬಂದು, ಸುಮಾರು ೧೧–೧೨ನೆಯ ಶತಮಾನದಿಂದೀಚಿನ ಶಾಸನಗಳಲ್ಲಿ ನಿರಂತರವಾಗಿ ಉಲ್ಲೇಖಿತಗೊಂಡಿದೆ. ತಿರುಮಕೂಡಲು ಹೆಸರಿನ ಗ್ರಾಮವನ್ನು ನರಸೀಪುರದ ಈಶಾನ್ಯ ಭಾಗದಲ್ಲಿರುವ ಕಾವೇರಿ–ಕಪಿಲ ಸಂಗಮಸ್ಥಳದಲ್ಲಿ ಈಗಲೂ ನೋಡಬಹುದಾಗಿದೆ. ಇದೇ ಹೆಸರು ೧೬ನೆಯ ಶತಮಾನದವರೆಗೆ, ಅಗಸ್ತ್ಯೇಶ್ವರ–ಗುಂಜಾನರಸಿಂಹಸ್ವಾಮಿ ಪರಿಸರಗಳಿಗೆ ಅನ್ವಯವಾಗುತ್ತಿದ್ದಂತೆ ತೋರುತ್ತದೆ. ಅಲ್ಲದೆ ಕಾವೇರಿ ಕಪಿಲ ನದಿಗಳ ಜೊತೆಗೆ ಗುಪ್ತಗಾಮಿನಿಯಾದ ಸ್ಫಟಿಕ ಸರೋವರದ ಉಲ್ಲೇಖವೂ ಶಾಸನಗಳಲ್ಲಿದೆ. ತಿರುಮಕೂಡಲಿನಲ್ಲಿ ಎರಡು ನದಿಗಳು ಕೂಡುವಲ್ಲಿ ನಂದಿಕಂಬವಿರುವ ಸ್ಥಳವೇ ಸ್ಫಟಿಕ ಸರೋವರವೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಇದರಿಂದಾಗಿ ಶಾಸನಗಳಲ್ಲಿ 'ತಿರುಮ(ನ್)ಕ್ಕುಡಲ್' ಎಂಬ ಪ್ರಯೋಗವು (ಮೂರು ಪವಿತ್ರ ಹೊಳೆಗಳು ಕೂಡುವ ಸ್ಥಳ) ಎಂಬ ಅರ್ಥವನ್ನು ನೀಡುತ್ತದೆಂಬ ಅಭಿಪ್ರಾಯವನ್ನು ಸಾಮಾನ್ಯವಾಗಿ ಸ್ವೀಕರಿಸಲಾಗಿದೆ. ಕಪಿಲ–ಕೌಂಡಿಣ್ಯ ನದಿಗಳ ಸಂಗಮದಲ್ಲಿರುವ ನಂಜನಗೂಡಿಗೂ

‘ಸಂಗಮ’ ಎಂದೇ ಕರೆಯಲಾಗುತ್ತಿದ್ದ ಅಂಶ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಆದರೆ, ಅದೇ ಕಪಿಲಾ ನದಿ ಇಲ್ಲಿ ಕಾವೇರಿಯಲ್ಲಿ ಐಕ್ಯವಾಗುವುದರಿಂದ ಇದು ‘ತಿರುಮಹಾಕೂಡಲು’ ಆಗಿರುವ ಸಾಧ್ಯತೆಯೇ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಮೇಲಿನ ಅಭಿಪ್ರಾಯವನ್ನು ಪುನರ್‌ವಿವೇಚಿಸುವ ಅಗತ್ಯವಿದೆ. ಆದರೆ ನರಸೀಪುರವು ಪ್ರಮುಖ ಅಗ್ರಹಾರ ಪಟ್ಟಣವಾಗಿ ರೂಪುಗೊಳ್ಳುವ ಮೊದಲು ನೆರೆಯ ಭೈರಾಪುರ ಆಲ್ಗೋಡು ಗ್ರಾಮಗಳು ಮಹತ್ವಪಡೆದಿದ್ದ ಅಂಶ ಅಲ್ಲಿಂದ ವರದಿಯಾಗಿರುವ ಶಾಸನಗಳಿಂದ ಸ್ಪಷ್ಟವಾಗುತ್ತದೆ. ನರಸೀಪುರದಲ್ಲಿರುವ ವಿಜಯನಗರ ಕಾಲದ ಗುಂಜಾನರಸಿಂಹಸ್ವಾಮಿ ದೇವಾಲಯದಿಂದಾಗಿ ಅದಕ್ಕೆ ನರಸೀಪುರ ಎಂಬ ಹೆಸರು ಬಂದಿದೆ. ಮುಂದೆ ಮೈಸೂರು ಅರಸರ ಆಳ್ವಿಕೆಯಲ್ಲಿ ಕಾವೇರಿ–ಕಪಿಲ ಸಂಗಮ (ತಿರುಮಕೂಡಲು) ಸ್ಥಳದ ಬಲದಂಡೆಯ ಮೇಲೆ ನರಸಿಂಹಪುರ ಎಂಬ ಅಗ್ರಹಾರವು ಸ್ಥಾಪಿಸಲ್ಪಟ್ಟ ಅಂಶ ನರಸೀಪುರದ ೧೬೨೨ರ ಶಾಸನದಿಂದ ವೇದ್ಯವಾಗುತ್ತದೆ. ತಿರುಮಕೂಡಲು, ಅಗಸ್ತೇಶ್ವರ ದೇವಾಲಯವನ್ನು ಹೊಂದಿರುವ ಶೈವ ಕ್ಷೇತ್ರವಾದರೆ, ನರಸೀಪುರವು ಗುಂಜಾನರಸಿಂಹನ ದೇವಾಲಯವಿರುವ ಶ್ರೀವೈಷ್ಣವ ಕ್ಷೇತ್ರವಾಗಿರುವುದು ಉಲ್ಲೇಖಾರ್ಹ. ಮುಂದೆ, ಕಾವೇರಿ–ಕಪಿಲ ನದಿ ಪರಿಸರದಲ್ಲಿರುವ ಈ ಎರಡೂ ಊರುಗಳ ಹೆಸರನ್ನು ಸಂಯುಕ್ತವಾಗಿ ಬಳಸುವುದು ರೂಢಿಗೆ ಬಂದು, ‘ತಿರುಮಕೂಡಲು ನರಸೀಪುರ ಎಂಬ ಹೆಸರೇ ತಾಲೂಕು ಕೇಂದ್ರಕ್ಕೂ ತಾಲೂಕಿಗೂ ಅನ್ವಯಗೊಂಡಿದೆ.

**ಭೌಗೋಳಿಕ ನಿರ್ದೇಶನ ಮತ್ತು ಮೇರೆ :** ಜಿಲ್ಲೆಯ ಪೂರ್ವಭಾಗದಲ್ಲಿ, ೭೬°–೪೬´ ಮತ್ತು ೭೭°–೦೦´ ಪೂರ್ವ ರೇಖಾಂಶ ಹಾಗೂ ೧೨°–೦೪´ ಮತ್ತು ೧೨°–೨೩´ ಉತ್ತರ ಅಕ್ಷಾಂಶಗಳ ನಡುವೆ, ಸಮುದ್ರಮಟ್ಟದಿಂದ ಸರಾಸರಿ ೮೫೦ ಮೀ. ಎತ್ತರದಲ್ಲಿ ಈ ತಾಲೂಕು ಹರಡಿಕೊಂಡಿದೆ. ತಾಲೂಕಿನ ಉತ್ತರಕ್ಕೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಮಂಡ್ಯ ಹಾಗೂ ಮದ್ದೂರು ತಾಲೂಕು; ಪೂರ್ವ ದಿಕ್ಕಿನಲ್ಲಿ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಹಾಗೂ ಮಂಡ್ಯಜಿಲ್ಲೆಯ ಮಳವಳ್ಳಿ ತಾಲೂಕು; ಆಗ್ನೇಯಕ್ಕೆ ಯಳಂದೂರು ತಾಲೂಕು, ದಕ್ಷಿಣಕ್ಕೆ ಚಾಮರಾಜನಗರ ತಾಲೂಕು; ನೈಋತ್ಯಕ್ಕೆ ಮೈಸೂರು ಜಿಲ್ಲೆಯ ನಂಜನಗೂಡು ಹಾಗೂ ಪಶ್ಚಿಮಕ್ಕೆ ಮೈಸೂರು ತಾಲೂಕುಗಳಿವೆ.

**ಭೌಗೋಳಿಕ ವಿಸ್ತೀರ್ಣ ಮತ್ತು ಜನಸಂಖ್ಯೆ :** ನರಸೀಪುರ ತಾಲೂಕಿನ ಒಟ್ಟು ಭೂ ವಿಸ್ತೀರ್ಣವು ಸುಮಾರು ೫೯೯.೨೧ ಚ.ಕಿ.ಮೀ.ಗಳಾಗಿದ್ದು, ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಶೇಕಡ ೧೦.೫ರಷ್ಟಿದೆ. ೨೦೦೧ರ ಗಣತಿಯಂತೆ ತಾಲೂಕಿನಲ್ಲಿದ್ದ ಒಟ್ಟು ಜನಸಂಖ್ಯೆ (೨,೭೯,೦೦೫)ಯಲ್ಲಿ ೧,೪೨,೧೬೭ ಪುರುಷರು ಹಾಗೂ ೧,೩೬,೮೩೮ ಮಹಿಳೆಯರಿದ್ದರು. ಇದರಲ್ಲಿ ೨,೪೫,೮೩೯ ಜನ ಗ್ರಾಮೀಣ ಪ್ರದೇಶಗಳಲ್ಲೂ, ೩೩,೧೬೬ ಜನ ನಗರಪ್ರದೇಶಗಳಲ್ಲೂ ನೆಲೆಸಿದ್ದರು. ಜಿಲ್ಲಾ ಮಟ್ಟದಲ್ಲಿ ಈ ತಾಲೂಕು ಭೌಗೋಳಿಕವಾಗಿ ಕೊನೆಯ ಸ್ಥಾನದಲ್ಲಿದ್ದರೆ, ಜನಸಂಖ್ಯಾ ದೃಷ್ಟಿಯಿಂದ ಮೂರನೆಯ ಸ್ಥಾನದಲ್ಲಿದೆ. ತಾಲೂಕಿನಲ್ಲಿ ಜನಸಾಂದ್ರತಾ ಪ್ರಮಾಣವು ಪ್ರತಿ ಚ.ಕಿ.ಮೀಗೆ ೪೬೬ ಇದ್ದು, ಜಿಲ್ಲಾ ಮಟ್ಟದ ಜನಸಾಂದ್ರತಾ ಪ್ರಮಾಣ (೩೮೫)ಕ್ಕಿಂತ ಅಧಿಕವಾಗಿದ್ದು, ಜನಸಾಂದ್ರತಾ



ದೃಷ್ಟಿಯಿಂದ ಜಿಲ್ಲಾ ಮಟ್ಟದಲ್ಲಿ ಎರಡನೆಯ ಸ್ಥಾನದಲ್ಲಿತ್ತು. ಅಲ್ಲದೇ ತಾಲೂಕಿನ ಸ್ತ್ರೀ–ಪುರುಷ ಪ್ರಮಾಣವು ೯೬೩ ಆಗಿತ್ತು. ಸಾಕ್ಷರತಾ ಪ್ರಮಾಣವು ಶೇ.೫೩.೬ ರಷ್ಟಿತ್ತು. ತಾಲೂಕಿನ ಜನಸಂಖ್ಯೆಯು ೨೦೧೦ರ ವೇಳೆಗೆ ೩,೧೪,೧೦೦ಕ್ಕೆ ಏರಬಹುದೆಂದು ನಿರೀಕ್ಷಿಸಲಾಗಿತ್ತು.

**ಆಡಳಿತಾತ್ಮಕ ಘಟಕವಾಗಿ ತಾಲೂಕಿನ ಇತಿಹಾಸ :** ಸುಮಾರು ಐದನೆಯ ಶತಮಾನದಲ್ಲಿ ತಲಕಾಡನ್ನು ಗಂಗರು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಳ್ಳುವ ಮೊದಲು ಕುವಲಾಲಪುರ (ಇಂದಿನ ಕೋಲಾರ) ಅವರ ರಾಜಧಾನಿಯಾಗಿತ್ತೆಂದು ಹೆಚ್ಚಿನ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದರೆ ಅದಕ್ಕೂ ಮೊದಲು ಈ ಪ್ರದೇಶವು ಕೆಲವು ದಶಕಗಳ ಕಾಲ ಕಂಚಿಯ ಪಲ್ಲವರ ಅಧೀನದಲ್ಲಿತ್ತೆಂಬ ಅಭಿಪ್ರಾಯವೂ ಇದೆ. ಗಂಗರ ಆಡಳಿತಾವಧಿಯಲ್ಲಿ ಗಂಗ ಸಾಮ್ರಾಜ್ಯದ ಗಂಗವಾಡಿ ೯೬೦೦೦ ಪ್ರಾಂತದ ರಾಜಧಾನಿಯಾಗಿದ್ದ ತಲಕಾಡೂ ಸೇರಿದ್ದಂತೆ ಈ ತಾಲೂಕು ಪ್ರದೇಶವು ವಡಗೆರೆ / ಬಡಗೆರೆ ನಾಡಿನಲ್ಲಿತ್ತು. ಗಂಗರನ್ನು ಬದಿಗೊತ್ತಿ ಈ ಭಾಗದಲ್ಲಿ ತಮ್ಮ ಅಧಿಪತ್ಯವನ್ನು ಚೋಳರು ಹತ್ತನೆಯ ಶತಮಾನದ ಅಂತ್ಯಭಾಗದಲ್ಲಿ ಸ್ಥಾಪಿಸಿದರು. ಅವರ ಆಡಳಿತಾವಧಿಯಲ್ಲಿ ಈ ಪ್ರದೇಶವು, ಮುಡಿಗೊಂಡ ಚೋಳಮಂಡಲಕ್ಕೆ ಸೇರಿದ ರಾಜೇಂದ್ರಚೋಳ ಒಳನಾಡಿನ ಇಡೈತೊರೈನಾಡಿನಲ್ಲಿದ್ದ ಅಂಶ ಈ ಭಾಗದಲ್ಲಿ ಲಭಿಸಿರುವ ಚೋಳ ಶಾಸನಗಳಿಂದ ವೇದ್ಯವಾಗುತ್ತದೆ ಮುಂದೆ ಸುಮಾರು ೧೧೧೬ರಲ್ಲಿ ಹೊಯ್ಸಳರು, ವಿಷ್ಣುವರ್ಧನನ ಮುಂದಾಳತ್ವದಲ್ಲಿ ಚೋಳರನ್ನು ತಲಕಾಡಿನಿಂದ ಹೊರದೂಡುವುದರೊಂದಿಗೆ ಈ ಪ್ರದೇಶವು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತು. ಆದರೆ ಹೊಯ್ಸಳರ ಅವನತಿಯ ಬೆನ್ನಲ್ಲೇ ತಲೆ ಎತ್ತಿದ ವಿಜಯನಗರ ಸಾಮ್ರಾಜ್ಯದಡಿ, ಶ್ರೀರಂಗಪಟ್ಟಣದ ಪ್ರಾಂತಾಧಿಕಾರಿಯ ನಿಯಂತ್ರಣಕ್ಕೆ ಈ ಪ್ರದೇಶವು ಒಳಪಡುವ ಮೊದಲು ಉಮ್ಮತ್ತೂರು ಪಾಳೇಗಾರರ ನಿಯಂತ್ರಣಕ್ಕೂ ಒಳಪಟ್ಟು, ರಾಜ ಒಡೆಯರ ಆಳ್ವಿಕೆಯಲ್ಲಿ ಮೈಸೂರು ಅರಸರ ಆಡಳಿತಕ್ಕೆ ಸೇರಿತು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಈ ಪ್ರದೇಶವನ್ನು ಒಳಗೊಂಡಿದ್ದ ಸೋಸಲೆ ಹಾಗೂ ತಲಕಾಡು ತಾಲೂಕುಗಳು ಅಷ್ಟಗ್ರಾಮ ಫೌಜುದಾರಿಯಲ್ಲಿ ಅಂತರ್ಗತವಾಗಿದ್ದವು. ಮುಂದೆ ಬ್ರಿಟಿಷ್ ಕಮೀಷನ್ನರುಗಳ ಆಡಳಿತಕ್ಕೆ ಮೈಸೂರು ಸಂಸ್ಥಾನವು ಒಳಪಟ್ಟು (೧೮೩೧) ಸಂಸ್ಥಾನದಲ್ಲಿದ್ದ ಆರು ಫೌಜುದಾರಿಗಳನ್ನು ನಾಲ್ಕು ವಿಭಾಗಗಳಾಗಿ ಪುನರ್‌ಸಂಘಟಿಸಲಾಯಿತು. ಆನಂತರ ೧೮೬೨ರಲ್ಲಿ ಸಂಸ್ಥಾನದಲ್ಲಿ ಮೂರು ವಿಭಾಗಗಳು ರೂಪುಗೊಂಡಾಗ ಮೈಸೂರು ಜಿಲ್ಲೆಯು ಅಷ್ಟಗ್ರಾಮ ವಿಭಾಗದ ನಿಯಂತ್ರಣಕ್ಕೊಳಪಟ್ಟಿತು. ಆಗ ಮೈಸೂರು ಜಿಲ್ಲೆಯಲ್ಲಿ ಇಂದಿನ ನರಸೀಪುರ ತಾಲೂಕು ಪ್ರದೇಶವನ್ನೊಳಗೊಂಡ ‘ತಲಕಾಡು’ ಒಂದು ತಾಲೂಕಾಗಿ ಅಸ್ತಿತ್ವಕ್ಕೆ ಬಂದು, ತಾಲೂಕುಕೇಂದ್ರವನ್ನು ತಿರುಮಕೂಡಲು ನರಸೀಪುರಕ್ಕೆ ೧೮೬೮ರಲ್ಲಿ ವರ್ಗಾಯಿಸುವವರೆಗೆ, ತಲಕಾಡು ಪಟ್ಟಣವೇ ಈ ತಾಲೂಕಿನ ಕೇಂದ್ರವಾಗಿತ್ತು. ಮುಂದೆ ೧೮೮೨ರಲ್ಲಿ ತಾಲೂಕಿನ ಹೆಸರನ್ನೂ ತಿರುಮಕೂಡಲು ನರಸೀಪುರ ಎಂದೇ ಮಾರ್ಪಡಿಸಲಾಯಿತು.

**ತಾಲೂಕಿನಲ್ಲಾದ ಗಡಿ ಬದಲಾವಣೆಗಳು** : ಈ ತಾಲೂಕಿಗೆ, ಆಗ ಹಳೆ ಅಷ್ಟಗ್ರಾಮ ತಾಲೂಕಿನಲ್ಲಿದ್ದ ಬನ್ನೂರು ಹಾಗೂ ಬೇವಿನಹಳ್ಳಿ ಹೋಬಳಿಗಳನ್ನು ೧೮೮೨ರಲ್ಲಿ ಸೇರಿಸಲಾಯಿತು. ಅದೇ ಸಂದರ್ಭದಲ್ಲಿ ಈ ತಾಲೂಕಿನ ತಾಯೂರು ಹೋಬಳಿಯನ್ನು ನೆರೆಯ ನಂಜನಗೂಡು ತಾಲೂಕಿಗೂ, ಪೂರಿಗಾಲಿ ಹೋಬಳಿಯನ್ನು ೧೮೮೬ರಲ್ಲಿ ನೆರೆಯ ಮಳವಳ್ಳಿ ತಾಲೂಕಿಗೂ ವರ್ಗಾಯಿಸಲಾಯಿತು. ಆನಂತರದಲ್ಲಿ ತಿ.ನರಸೀಪುರ ಹೋಬಳಿಯ ೧೦ ಹಾಗೂ ತಲಕಾಡು ಹೋಬಳಿಯ ಏಳು ಹಳ್ಳಿಗಳನ್ನು ಒಗ್ಗೂಡಿಸಿ ೧೭ ಹಳ್ಳಿಗಳನ್ನೊಳಗೊಂಡ ಮೂಗೂರು ಹೋಬಳಿಯನ್ನು ೧೯೪೧ರಲ್ಲಿ ರೂಪಿಸಲಾಯಿತು. ಅಲ್ಲಿಂದೀಚೆಗೆ ಈ ತಾಲೂಕು ಯಾವುದೇ ಭೌಗೋಳಿಕ ಮಾರ್ಪಾಡುಗಳಿಲ್ಲದೆ ಮುಂದುವರಿದುಕೊಂಡು ಬಂದಿದ್ದು, ಮೈಸೂರು ಕಂದಾಯ ಉಪವಿಭಾಗಕ್ಕೆ ಸೇರಿದೆ. ತತ್ಪರಿಣಾಮವಾಗಿ ಪ್ರಸ್ತುತ ತಾಲೂಕಿನಲ್ಲಿ ಐದು ಹೋಬಳಿಗಳಿವೆ. ಅವುಗಳಲ್ಲಿ ಕಸಬಾ ಹೋಬಳಿಯಲ್ಲಿ ೨೪ ಕಂದಾಯಗ್ರಾಮ, ನಾಲ್ಕು ನಿರ್ವಸತಿಗ್ರಾಮ ಹಾಗೂ ೨೦ ಉಪಗ್ರಾಮಗಳಿದ್ದರೆ, ಬನ್ನೂರು ಹೋಬಳಿಯಲ್ಲಿ ೨೬ ಕಂದಾಯಗ್ರಾಮ ಹಾಗೂ ೧೬ ಉಪಗ್ರಾಮಗಳಿವೆ. ತಾಲೂಕಿನಲ್ಲಿ ಅತ್ಯಂತ ಹೆಚ್ಚು ಗ್ರಾಮಗಳನ್ನು (೪೦) ಹೊಂದಿರುವ ಸೋಸಲೆ ಹೋಬಳಿಯಲ್ಲಿ ೩೬ ಕಂದಾಯಗ್ರಾಮ, ನಾಲ್ಕು ನಿರ್ವಸತಿಗ್ರಾಮ ಹಾಗೂ ೨೭ ಉಪಗ್ರಾಮಗಳಿವೆ. ತಲಕಾಡು ಹೋಬಳಿಯಲ್ಲಿ ೨೦ ಕಂದಾಯಗ್ರಾಮ ಒಂದು ನಿರ್ವಸತಿಗ್ರಾಮ ಹಾಗೂ ೨೧ ಉಪಗ್ರಾಮಗಳಿವೆ. ತಾಲೂಕಿನ ಅತ್ಯಂತ ಸಣ್ಣ ಹೋಬಳಿ ಮೂಗೂರಾಗಿದ್ದು, ಇದರಲ್ಲಿ ೧೭ ಕಂದಾಯಗ್ರಾಮ ಹಾಗೂ ೧೦ ಉಪಗ್ರಾಮಗಳಿವೆ.

**ತಾಲೂಕಿನ ಮೇಲ್ಮೈಲಕ್ಷಣ** : ತಾಲೂಕು ಪ್ರದೇಶವು, ದಕ್ಷಿಣ ಪ್ರಸ್ಥ(ಪೀಠ)ಭೂಮಿಯ ಭಾಗವಾಗಿದ್ದು, ಬಯಲು ಪ್ರದೇಶವಾದರೂ ಏರುತಗ್ಗುಗಳಿಂದ ಕೂಡಿದ್ದು, ಅಲ್ಲಲ್ಲಿ ಸಣ್ಣಪುಟ್ಟ ಗುಡ್ಡಗಳಿವೆ. ಸಮುದ್ರಮಟ್ಟದಿಂದ ಸುಮಾರು ೮೦೦–೯೦೦ ಮೀ ಎತ್ತರದಲ್ಲಿದ್ದು, ಸಮಶೀತೋಷ್ಣ ವಾಯುಗುಣವನ್ನು ಹೊಂದಿದೆ.

**ಬೆಟ್ಟಗುಡ್ಡಗಳು** : ತಾಲೂಕಿನ ನರಸೀಪುರ–ಬನ್ನೂರು ರಸ್ತೆಯಲ್ಲಿ ಅತ್ತಹಳ್ಳಿಯಿಂದ ಉತ್ತರಕ್ಕೆ ಎರಡು ಕಿ.ಮೀ. ದೂರದ ಬಿ.ಬೆಟ್ಟಹಳ್ಳಿ ಸಮೀಪವಿರುವ ಒಡಗಲ್ ರಂಗನಾಥಸ್ವಾಮಿ ಬೆಟ್ಟವು, ಇತಿಹಾಸ ಪೂರ್ವಕಾಲದ ಅವಶೇಷಗಳನ್ನು ಹೊಂದಿದ್ದು, ಬೆಟ್ಟದ ಮೇಲೆ ರಂಗನಾಥಸ್ವಾಮಿಯ ದೇವಾಲಯವಿದೆ. ಈ ಬೆಟ್ಟವನ್ನು ಸುಮಾರು ೧೫–೧೬ನೆಯ ಶತಮಾನದ ಶಾಸನವೊಂದರಲ್ಲಿ 'ವಡಕಲ್ಲು ರಂಗನಾಥ' ಎಂದೇ ಉಲ್ಲೇಖಿಸಲಾಗಿದೆ. ಈ ಬೆಟ್ಟದಿಂದ ಐದು ಕಿ.ಮೀ. ದಕ್ಷಿಣಕ್ಕಿರುವ ಉಕ್ಕಲಗೆರೆಯ ಮಲಪ್ಪನಬೆಟ್ಟದ ಮೇಲೆ ಮಲ್ಲಪ್ಪನ ದೇವಾಲಯವಿದೆ. ತಾಲೂಕಿನ ವಾಯವ್ಯಭಾಗದ ರಂಗಸಮುದ್ರ–ನರಸೀಪುರ ಮಾರ್ಗದಲ್ಲಿ, ಕಾವೇರಿಯ ಎಡದಂಡೆಯ ತುಂಬಲ ಗ್ರಾಮದ ವ್ಯಾಪ್ತಿಯಲ್ಲಿರುವ ಕಂಬದರಾಯನ ಬೆಟ್ಟದ ಮೇಲೆ ಕಂಬದರಾಯನ ದೇವಾಲಯವಿದೆ. ತಾಲೂಕಿನ ಪೂರ್ವಭಾಗದಲ್ಲಿ ಸರಗೂರು–ತಲಕಾಡು ರಸ್ತೆಯಲ್ಲಿ ಬೆಟ್ಟಹಳ್ಳಿ ಬಳಿ ಕಾವೇರಿ ನದಿಯ ಎಡದಂಡೆ ಮೇಲೆ ಮುಡುಕುತೊರೆಬೆಟ್ಟ ಹಾಗೂ ಬೋಳುಬೆಟ್ಟಗಳಿವೆ.



ಇವುಗಳಲ್ಲಿ ಮುಡುಕುತೊರೆಬೆಟ್ಟದ ಮೇಲೆ ಭ್ರಮರಾಂಬ ಹಾಗೂ ಮಲ್ಲಿಕಾರ್ಜುನ ದೇವಾಲಯಗಳಿದ್ದು, ಸುಮಾರು ೧೬ನೆಯ ಶತಮಾನದ ಶಾಸನವೊಂದರಲ್ಲಿ ಮುಡುಕುತೊರೆ ಬೆಟ್ಟದ ಉಲ್ಲೇಖವಿದೆ. ತಾಲೂಕಿನ ದಕ್ಷಿಣಭಾಗದಲ್ಲಿ ಆದಿಬೆಟ್ಟಹಳ್ಳಿ–ಹ್ಯಾಕನೂರು ಬಳಿ ಹಬ್ಬಿಕೊಂಡಿರುವ ಬಜ್ಜಿಬೆಟ್ಟವು ನೆರೆಯ ಚಾಮರಾಜನಗರ ತಾಲೂಕಿನ ವ್ಯಾಪ್ತಿಗೆ ಒಳಪಟ್ಟಿದೆ. ತಾಲೂಕಿನ ಆಗ್ನೇಯ ಭಾಗದಲ್ಲಿ ಕಲಿಯೂರು–ಕುಂತೂರು (ಕೊಳ್ಳೇಗಾಲ ತಾ.) ಗ್ರಾಮಗಳ ನಡುವಣ ಕುಂತೂರು ಬೆಟ್ಟದ ಮೇಲೆ ಪ್ರಭುದೇವರ ಆಲಯವಿದ್ದು, ಬೆಟ್ಟದ ಉಲ್ಲೇಖವು ೧೫ನೆಯ ಶತಮಾನದ ಶಾಸನವೊಂದರಲ್ಲಿದೆ. ಈ ಬೆಟ್ಟಗಳೆಲ್ಲವೂ ಬೋಳುಬೋಳಾಗಿದ್ದು, ಕಣಶಿಲೆಯಿಂದ ಕೂಡಿದ್ದು, ಕುರುಚಲು ಅರಣ್ಯವನ್ನೂ ಹೊಂದಿವೆ. ಆದರೆ ಇದಕ್ಕೆ ಅಪವಾದವೆಂಬಂತೆ ಮುಡುಕುತೊರೆಬೆಟ್ಟದ ಪೂರ್ವಭಾಗವು ಕಪ್ಪುಶಿಲೆಯನ್ನು ಹೊಂದಿದೆ.

**ನದಿಗಳು** : ನಾಡಿನ ಪ್ರಮುಖ ನದಿಗಳಲ್ಲಿ ಒಂದಾದ **ಕಾವೇರಿ** ನದಿಯು ದಕ್ಷಿಣಗಂಗೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಸ್ಕಂಧಪುರಾಣದ ಕಾವೇರಿ ಮಹಾತ್ಮೆಯ ಪ್ರಕಾರ, ಬ್ರಹ್ಮನು ಕಾವೇರಿಮುನಿಗೆ ವರವಾಗಿ ದಯಪಾಲಿಸಿದ್ದ ಕಾವೇರಿಯನ್ನು ಅಗಸ್ತ್ಯಮುನಿಯು ವಿವಾಹವಾದನೆಂದು ಹೇಳಲಾಗುತ್ತದೆ. ದಕ್ಷಿಣಕರ್ನಾಟಕದ ಪ್ರಮುಖ ನದಿಯಾದ ಇದು ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಜನಿಸಿ, ಕೊಡಗು, ಹಾಸನ, ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಪ್ರವಹಿಸಿ ನೆರೆಯ ತಮಿಳುನಾಡಿನ ಮೂಲಕ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಇದು ತಾಲೂಕನ್ನು ರಂಗನಾಥಪುರದ ಬಳಿ ಪ್ರವೇಶಿಸಿ, ಬನ್ನೂರು ಹೋಬಳಿಯ ಮೂಲಕ ಹರಿದು ನರಸೀಪುರದ ಬಳಿ ಬರುತ್ತಿದ್ದಂತೆ ತಿರುಮಕೂಡಲಿನಲ್ಲಿ ಉಪನದಿಯಾದ ಕಪಿಲ (ಕಬಿನಿ) ನದಿಯು ಇದನ್ನು ಕೂಡಿಕೊಳ್ಳುತ್ತದೆ. ಆನಂತರ ಓರೆ–ಕೋರೆಯಾಗಿ ತಾಲೂಕಿನ ಪೂರ್ವಭಾಗದಲ್ಲಿ ಕಸಬಾ ಹಾಗೂ ತಲಕಾಡು ಹೋಬಳಿಗಳ ಮೂಲಕ ಹರಿದು ಮಂಡ್ಯ, ಚಾಮರಾಜನಗರ, ರಾಮನಗರ ಜಿಲ್ಲೆಗಳ ಮೂಲಕ ಸಾಗಿ ತಮಿಳುನಾಡನ್ನು ಪ್ರವೇಶಿಸುತ್ತದೆ. ಈ ನದಿಯು ತಿ.ನರಸೀಪುರ ಹಾಗೂ ಮಳವಳ್ಳಿ (ಮಂಡ್ಯ ಜಿಲ್ಲೆ) ತಾಲೂಕುಗಳ ಗಡಿಯಾಗಿ ಮೂರು ಕಿ.ಮೀ. ಹರಿದರೆ, ನರಸೀಪುರ–ಕೊಳ್ಳೆಗಾಲ (ಚಾಮರಾಜನಗರ ಜಿಲ್ಲೆ) ತಾಲೂಕುಗಳ ಗಡಿಯಾಗಿ ಸುಮಾರು ೧೫ ಕಿ.ಮೀ. ಹರಿಯುತ್ತದೆ. ತಾಲೂಕಿನಲ್ಲಿ ಸುಮಾರು ೭೨ ಕಿ.ಮೀ. ಕ್ರಮಿಸುವ ಈ ನದಿಯ ಪಾತ್ರವು, ಕಪಿಲನದಿಯನ್ನು ಕೂಡುವುದಕ್ಕೆ ಮೊದಲು ಕೆಲವೆಡೆ ೨೭೦ ರಿಂದ ೩೬೦ ಮೀಟರುಗಳಷ್ಟು ಅಗಲವಾಗಿದ್ದು, ಕಪಿಲ ಸಂಗಮದ ನಂತರ ಇದರ ಶಿಲಾಮಯ ಪಾತ್ರವು ಮತ್ತಷ್ಟು ಹಿರಿದಾಗಿ ಮರಳು ಸಮೃದ್ಧವಾಗಿ ಶೇಖರಣೆಯಾಗುತ್ತದೆ. ಮಳೆಗಾಲದಲ್ಲಿ ಪ್ರವಾಹದಿಂದಾಗಿ ಉಕ್ಕಿಹರಿದು, ನೆರೆ ಹಾವಳಿಯನ್ನುಂಟು ಮಾಡಿದರೂ. ಬೇಸಿಗೆಯಲ್ಲಿ ನೀರು ಕಡಿಮೆ ಇದ್ದಾಗ ಕಾಲ್ನಡಿಗೆಯಲ್ಲೇ ತುಂಬಲ, ಸೋಸಲೆ, ತಿರುಮಕೂಡಲು, ತಲಕಾಡು, ಕುಕ್ಕೂರು ಮುಂತಾದೆಡೆಗಳಲ್ಲಿ ಇದನ್ನು ದಾಟಬಹುದಾಗಿದ್ದು ಮಳೆಗಾಲದಲ್ಲಿ ತೆಪ್ಪ, ಹರಿಗೋಲು, ಮುಂತಾದವು ಈಗಲೂ ಬಳಕೆಯಲ್ಲಿವೆ. ಕಾವೇರಿ ನದಿಯ

ತೀರಪ್ರದೇಶವು ಎರೆ(ಕಪ್ಪು)ಮಣ್ಣಿನಿಂದ ಕೂಡಿದ್ದು, ಉತ್ತಮ ಫಸಲಿಗೆ ಹಾದಿ ಮಾಡಿಕೊಟ್ಟಿದ್ದು, ಇದಕ್ಕೆ ನದಿ–ಕಾಲುವೆ ನೀರಾವರಿಯೂ ಪೂರಕವಾಗಿದೆ. ಈ ನದಿಗೆ ಕರಿಘಟ್ಟ (ಶ್ರೀರಂಗಪಟ್ಟಣ)ದ ಬಳಿ ನಿರ್ಮಿಸಿರುವ ರಾಮಸ್ವಾಮಿ ಅಣೆಯ ರಾಜಪರಮೇಶ್ವರಿ ಹಾಗೂ ರಾಮಸ್ವಾಮಿ ನಾಲೆಗಳು ತಾಲೂಕಿನ ಬನ್ನೂರು, ಸೋಸಲೆ ಹಾಗೂ ತಲಕಾಡು ಹೋಬಳಿಯ ಅನೇಕ ಗ್ರಾಮಗಳಿಗೆ ನೀರಾವರಿ ಸೌಕರ್ಯವನ್ನು ಒದಗಿಸುತ್ತವೆ. ಇದೇ ನದಿಗೆ ವಿಜಯನಗರದರಸರ ಕಾಲದಲ್ಲಿ ಹೆಮ್ಮಿಗೆ ಬಳಿ ನಿರ್ಮಿಸಿರುವ ಮಾಧವಮಂತ್ರಿ ಅಣೆಕಟ್ಟೆಯಿಂದಾಗಿ ತಲಕಾಡು ಹೋಬಳಿಯ ಹಲವಾರು ಗ್ರಾಮಗಳಿಗೆ ನೀರಾವರಿ ಸೌಲಭ್ಯ ಲಭಿಸುವಂತಾಗಿದೆ. ಈ ನದಿಯು, ತಾಲೂಕಿನ ಸುಮಾರು ೧೦–೧೧ನೆ ಶತಮಾನದಿಂದೀಚಿನ ನಾಲ್ಕಾರು ಶಾಸನಗಳಲ್ಲಿ ಉಲ್ಲೇಖಿತಗೊಂಡಿದೆ.

**ಕಪಿಲ ನದಿ :** ಕಾವೇರಿ ನದಿಯ ಉಪನದಿಗಳಲ್ಲಿ ಪ್ರಮುಖವಾಗಿರುವ ಇದಕ್ಕೆ ಕಬಿನಿ/ಕಪ್ಪುಹೊಳೆ ಎಂಬ ಹೆಸರೂ ರೂಢಿಯಲ್ಲಿದೆ. ಕೇರಳ ರಾಜ್ಯದ ಉತ್ತರ ವೈನಾಡಿನಲ್ಲಿ ಹುಟ್ಟುವ ಈ ನದಿಯು ಕರ್ನಾಟಕವನ್ನು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಬಾವಳಿ ಮೂಲಕ ಪ್ರವೇಶಿಸುತ್ತದೆ. ಅದಕ್ಕೆ ಬಿದರಹಳ್ಳಿ (ಬೀಚನಹಳ್ಳಿ – ಹೆಗ್ಗಡದೇವನಕೋಟೆ ತಾಲೂಕು) ಬಳಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಇದು ಕಾವೇರಿ ನದಿಯನ್ನು ತಿರುಮಕೂಡಲಿನ ಬಳಿ ಬಲಭಾಗದಿಂದ ಬಂದು ಸೇರುವ ಮೊದಲು ನಂಜನಗೂಡು, ಮೈಸೂರು ತಾಲೂಕುಗಳ ಮೂಲಕ ಹರಿದು, ತಾಲೂಕಿನ ಪಶ್ಚಿಮಭಾಗದಲ್ಲಿ ಸುಮಾರು ನಾಲ್ಕು ಕಿ.ಮೀ.ಗಳಷ್ಟು ದೂರ ಕ್ರಮಿಸಿ ತಿರುಮಕೂಡಲಿನಲ್ಲಿ ಕಾವೇರಿಯೊಂದಿಗೆ ಒಂದಾಗುತ್ತದೆ. ಬೀಚನಹಳ್ಳಿ ಕಬಿನಿ ಅಣೆಕಟ್ಟೆಯ ಬಲದಂಡೆ (ತಗಡೂರು ರಾಮಚಂದ್ರರಾವ್) ನಾಲೆಯಿಂದಾಗಿ ತಾಲೂಕಿನ ಮೂಗೂರು ಹೋಬಳಿಯ ಅನೇಕ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಲಭಿಸುವಂತಾಗಿದೆ. ಸುಮಾರು ೧೦–೧೧ನೆ ಶತಮಾನಕ್ಕೆ ಸೇರಿದ ತಾಲೂಕಿನ ಶಾಸನಗಳಲ್ಲಿ ಕಪಿಲ ನದಿಯ ಉಲ್ಲೇಖವು ಕಾವೇರಿ ನದಿಯೊಂದಿಗೆ ಜೊತೆಜೊತೆಯಾಗಿ ಕಂಡುಬರುತ್ತದೆ. ಇವುಗಳಲ್ಲದೆ ಮೂಗೂರು ಬಳಿ ಹರಿಯುವ ಅಡ್ಡಹಳ್ಳ ಮುಂತಾದ ಸಣ್ಣಪುಟ್ಟ ಹಳ್ಳಕೊಳ್ಳಗಳೂ ತಾಲೂಕಿನಲ್ಲಿವೆ.

**ಅಂತರ್ಜಲ :** ಜಿಲ್ಲೆಯ ಇತರೆಡೆಗಳಂತೆ ಈ ತಾಲೂಕಿನಲ್ಲೂ ಅಂತರ್ಜಲವು ಸಮೃದ್ಧವಾಗಿದೆ. ಹಿಂದೆ ಅಂತರ್ಜಲವನ್ನು ಬಾವಿ ತೋಡುವುದರ ಮೂಲಕ ಸದುಪಯೋಗಪಡಿಸಿಕೊಳ್ಳಲಾಗುತ್ತಿತ್ತು. ಆದರೆ ಕೊಳವೆಬಾವಿಗಳ ಅವಿಷ್ಕಾರದಿಂದಾಗಿ ಅಂತರ್ಜಲವನ್ನು ವರ್ಷದುದ್ದಕ್ಕೂ ಬಳಸಿಕೊಳ್ಳುವಂತಾಗಿದೆ. ೨೦೦೮–೦೯ರ ಸಾಲಿನಲ್ಲಿ ತಾಲೂಕಿನಲ್ಲಿ ಏಳು ಬಾವಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ನೀರಾವರಿ ಪ್ರದೇಶದಲ್ಲಿ ಭೂಮಟ್ಟದಿಂದ ಕನಿಷ್ಟ ೩.೮೬ ಮೀ.ನಿಂದ ಗರಿಷ್ಟ ೭.೫೦ ಮೀ. ಹಾಗೂ ಖುಷ್ಕಿ ಪ್ರದೇಶದಲ್ಲಿ ಕನಿಷ್ಟ ೧೧.೭೫ ಮೀ. ನಿಂದ ೧೪.೫೦ ಮೀ. ಆಳದಲ್ಲಿ ಅಂತರ್ಜಲ ಮಟ್ಟ ದಾಖಲಾಗಿದ್ದು, ತಾಲೂಕಿನಲ್ಲಿ ೩೧೮೪ ಹೆಕ್ಟೇರ್ ಮೀಟರ್ ಅಂತರ್ಜಲ ಲಭ್ಯವಿದ್ದು, ಅದರಲ್ಲಿ ೨.೨೬೧ ಹೆ.ಮೀ. ಬಳಕೆಯಾಗಿದ್ದು, ೯೨೩ ಹೆ.ಮೀ.ನಷ್ಟು ಅಂತರ್ಜಲವನ್ನು ಬಳಸಿಕೊಳ್ಳಲು ಇನ್ನೂ ಅವಕಾಶವಿತ್ತು. ತಾಲೂಕಿನಲ್ಲಿ ಪಂಪ್‌ಸೆಟ್–



ಕೊಳವೆಬಾವಿಗಳ ಸಂಖ್ಯೆ ದಶಕದಿಂದ ದಶಕಕ್ಕೆ ವೃದ್ಧಿಸುತ್ತಾ ಬಂದಿದೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೭೨೧೮ ಪಂಪ್‌ಸೆಟ್‌ಗಳಿದ್ದು, ೭೨೬.೩೬ ಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಬಳಸಲಾಗಿತ್ತು. ಅದೇ ಸಾಲಿನಂತ್ಯಕ್ಕೆ ತಾಲೂಕಿನಲ್ಲಿ ಒಟ್ಟು ೧೩೬೪ ಕೊಳವೆ ಬಾವಿಗಳಿದ್ದವು.

ತಾಲೂಕಿನ ಭೂಪ್ರದೇಶವು ಸಮುದ್ರಮಟ್ಟದಿಂದ ಸರಾಸರಿ ೮೫೦ ಮೀಟರ್ ಎತ್ತರದಲ್ಲಿದ್ದು, ಮೇಲ್ಭಾಗವು ಒರಟಾದ ಕ್ರಿಸ್ಟಲೈನ್ ಶಿಲೆಗಳಿಂದ ಕೂಡಿದ್ದು, ಜಲವನ್ನು ಸುದೀರ್ಘ ಕಾಲ ಹಿಡಿದಿಡುವ ಸಾಮರ್ಥ್ಯವನ್ನು ಹೊಂದಿದೆ. ಇದರ ಮೇಲ್ಪದರದಲ್ಲಿ ಕಂಡು ಬರುವ ಪೋರಸ್ ಕಣಯುಕ್ತ ಸಡಿಲ ಮಣ್ಣಿನ ಸ್ತರಗಳ ಪ್ರತೀ ಕ್ಯೂಬಿಕ್ ಅಡಿ ಮಣ್ಣು ಸುಮಾರು ಮೂರು ಗ್ಯಾಲನ್ ನೀರನ್ನು ಹೀರಿಡುವಷ್ಟು ಸಾಮರ್ಥ್ಯವನ್ನು ಹೊಂದಿರುತ್ತದೆ. ಅಕ್ಟೋಬರ್ ಅಂತ್ಯದವರೆಗೆ ಅಂತರ್ಜಲಮಟ್ಟವು ಮೇಲ್ಪದರಕ್ಕೆ ಸನಿಹದಲ್ಲಿರುತ್ತದೆ. ಆದರೆ ಕ್ರಮೇಣ ಅಂತರ್ಜಲ ಮಟ್ಟವು ಇಳಿಮುಖವಾಗುತ್ತಾ ಸಾಗಿ ಮಾರ್ಚ್–ಏಪ್ರಿಲ್ ವೇಳೆಗೆ ತೀರಾ ಕೆಳಕ್ಕಿಳಿಯುತ್ತದೆಂದು ತಿಳಿದುಬರುತ್ತದೆ.

**ತಾಲೂಕಿನ ಭೂಶಿಲಾ ಲಕ್ಷಣ:** ತಾಲೂಕು ಪ್ರದೇಶವು ಸುಮಾರು ೨೮೦–೩೦೦ ಲಕ್ಷ ವರ್ಷಗಳ ಹಿಂದೆ ಪ್ರಿಕ್ಯಾಂಬಿಯನ್ ಯುಗದಲ್ಲಿ ರೂಪುಗೊಂಡ ಪ್ರಾಚೀನ ಶಿಲಾರಚನೆಗಳಿಂದ ರಚಿಸಲ್ಪಟ್ಟಿರುವ ಅಂಶವನ್ನು ಭೂಗರ್ಭಶಾಸ್ತ್ರಜ್ಞರು ಈಗಾಗಲೇ ಬೆಳಕಿಗೆ ತಂದಿದ್ದಾರೆ. ಪರ್ಯಾಯದ್ವೀಪ (ಪೆನಿನ್ಸುಲಾರ್) ನೀಸ್ ಶಿಲಾಶ್ರೇಣಿ ಎಂದೂ ಕರೆಯಲ್ಪಟ್ಟಿರುವ ಇದು ಉತ್ತಮ ದರ್ಜೆಯ ಸಿಸ್ಟ್ ಶಿಲಾಪದರಗಳನ್ನು ಹೊಂದಿದೆ. ಡಯಟೆಕ್ಸಟಿಕ್ ಹಾಗೂ ಮೆಟಟೆಕ್ಸಿಟಿಕ್ ಮಾದರಿಗಳಿಂದ ಕೂಡಿದ ಮಿಗ್ಮಟೈಟ್ಸ್ ಶಿಲಾಪದರಗಳ ನಡುವೆ ಅಲ್ಲಲ್ಲಿ ಎಂಪಿಬೂಲೈಟ್ ಶಿಲಾಪದರವೂ ಕಂಡು ಬರುತ್ತದೆ. ಇದನ್ನು ಸರಗೂರು ಶಿಲಾಸಮೂಹ ಎಂದೂ ಕರೆಯಲಾಗುತ್ತದೆ. ಈ ಶಿಲಾಶ್ರೇಣಿಯ ಸುತ್ತಮುತ್ತ ಇರುವ ನೀಸ್ ಶಿಲಾಪದರವು ಅಷ್ಟೇ ಪುರಾತನ ಕಾಲದ್ದೆಂದು ತಿಳಿದು ಬರುತ್ತದೆ. ಅಲ್ಲದೆ ಸರಗೂರು ಸಿಸ್ಟ್, ಕಯೋನೈಟ್, ಸಿಲಿಮನೈಟ್, ಗ್ರಾಫೈಟ್ ಹಾಗೂ ಇತರ ಖನಿಜಗಳನ್ನು ಹೊಂದಿದೆ. ಮೈಸೂರು ಜಿಲ್ಲೆಯ ಬಹುಭಾಗವು ಮಿಗ್ಮಟೈಟ್ಸ್ ಶಿಲಾಪದರಗಳಿಂದ ಕೂಡಿದ್ದು, ನರಸೀಪುರ ತಾಲೂಕಿನಲ್ಲೂ ಅದೇ ಶಿಲಾಪದರ ಅಧಿಕ ಪ್ರಮಾಣದಲ್ಲಿದೆ. ಅಲ್ಲದೆ ಕೊಳ್ಳೆಗಾಲ ತಾಲೂಕಿಗೆ ಹೊಂದಿಕೊಂಡಂತೆ ಇರುವ ತಾಲೂಕಿನ ಪೂರ್ವಭಾಗವು ರಾಮನಗರ ಶಿಲಾಶ್ರೇಣಿ (ಸುಮಾರು ೨೩೮ ಲಕ್ಷ ವರ್ಷಗಳಷ್ಟು ಪ್ರಾಚೀನ)ಯಿಂದ ಕೂಡಿದೆ.

**ಭೂ ಕಂಪನಮುಕ್ತ ವಲಯ :** ಪ್ರಾಕೃತಿಕ ವಿಕೋಪಗಳಲ್ಲಿ ಒಂದಾದ ಭೂಕಂಪವು ಮಾನವನನ್ನು ಅನಾದಿಕಾಲದಿಂದ ಕಾಡುತ್ತಿದೆ. ಪ್ರಿಕ್ಯಾಂಬಿಯನ್ ಯುಗದಲ್ಲಿ ರೂಪುಗೊಂಡಿರುವ ದಕ್ಷಿಣಪೀಠ ಭೂಮಿಯಲ್ಲಿ ಈ ತಾಲೂಕು ಪ್ರದೇಶವು ಇರುವುದರಿಂದ ಭೂಕಂಪನ ಸಾಧ್ಯತೆ ತೀರಾ ವಿರಳವೆಂದೇ ಈ ವರೆಗೆ ಭಾವಿಸಲಾಗಿತ್ತು. ಆದರೆ ೧೮೪೩ರಲ್ಲಿ ಜರುಗಿದ ಬಳ್ಳಾರಿ ಭೂಕಂಪ, ೧೯೦೦ರಲ್ಲಿ ಘಟಿಸಿದ ಕೊಯಮತ್ತೂರು

ಭೂಕಂಪ, ಮಂಡ್ಯದ ೧೯೭೨ರ ಲಘು ಭೂಕಂಪ, ಧಾರವಾಡದ ೧೯೮೪ರ ಭೂಕಂಪ, ೧೯೯೩ರ ಲಾತೂರು ಭೂಕಂಪ, ೧೯೯೬ರ ಧಾರವಾಡ ಭೂಕಂಪ, ಮುಂತಾದವುಗಳ ತೀವ್ರತೆಯ ಅನುಭವ ರಾಜ್ಯದ ವಿವಿಧೆಡೆಗಳಂತೆ, ನರಸೀಪುರದಲ್ಲೂ ಉಂಟಾಯಿತೆಂದು ತಿಳಿದುಬರುತ್ತದೆ. ಬ್ಯೂರೊ ಆಫ್ ಇಂಡಿಯಾ ಸ್ಟ್ಯಾಂಡರ್ಡ್(ಬಿಐಎಸ್)ನವರು ರೂಪಿಸಿರುವ ಭಾರತೀಯ ಭೂಕಂಪನ ವಲಯ ನಕಾಶೆಯಲ್ಲಿ ಕರ್ನಾಟಕ ರಾಜ್ಯವನ್ನು ಒಂದು, ಎರಡು ಹಾಗೂ ಮೂರನೆಯ ವಲಯದಲ್ಲಿ ಗುರುತಿಸಲಾಗಿದ್ದು, ಇದನ್ನು ಸುಧಾರಿತ ಮೆಕಾಲ್ಲಿ ಪ್ರಮಾಣದನ್ವಯ ಗರಿಷ್ಠ ತೀವ್ರತೆಯಿರುವ V, VI, VII ಪ್ರವರ್ಗದೊಂದಿಗೆ ಸಮೀಕರಿಸಲಾಗಿದೆ.

**ಖನಿಜ ಸಂಪತ್ತು :** ಈ ತಾಲೂಕು, ಸೀಮಿತ ಖನಿಜಸಂಪನ್ಮೂಲವನ್ನು ಹೊಂದಿದೆ. ನರಸೀಪುರ ತಾಲೂಕಿನ ಕುಪ್ಯಾದಿಂದ ಮಂಡ್ಯದವರೆಗೆ ಸುಮಾರು ೩೦ ಕಿ.ಮೀ. ಪ್ರದೇಶದಲ್ಲಿ ಕೊರಂಡಮ್ ನಿಕ್ಷೇಪವು ಹರಡಿಕೊಂಡಿದೆ. ಕಸಬಾ ಹೋಬಳಿಯ ಕುಪ್ಯಾ ಬಳಿ ಉತ್ತಮ ಗುಣಮಟ್ಟದ ನಕ್ಷತ್ರಾಕಾರದ ರೂಬಿ ಕೊರಂಡಮ್ ನಿಕ್ಷೇಪವಿದೆ. ನೀಲಿ ಹಾಗೂ ಬೂದು ಬಣ್ಣದ ಕೊರಂಡಮ್ ಬಂಡೆಗಳು ಬೊಮ್ಮನಹಳ್ಳಿಯಲ್ಲಿ ಕಂಡು ಬರುತ್ತವೆ. ತಾಲೂಕಿನ ಬನ್ನೂರು ಹೋಬಳಿಯ ಬೂತಗಹಳ್ಳಿಯಲ್ಲಿ ಕಿಂಚಿತ್ ಪ್ರಮಾಣದಲ್ಲಿ ಚಿನ್ನದ ಅದಿರು ಲಭಿಸುತ್ತದೆ. ಬನ್ನೂರು ಹೋಬಳಿಯ ಅರವಟ್ಟಿಗೆ ಕೊಪ್ಪಲಿನಲ್ಲಿ ಸೀಸದ ನಿಕ್ಷೇಪವೂ, ಬನ್ನೂರು ಹಾಗೂ ಕುಪ್ಯಾಗಳಲ್ಲಿ ಮ್ಯಾಗ್ನೆಸೈಟ್ ನಿಕ್ಷೇಪವೂ ಅಲ್ಪಪ್ರಮಾಣದಲ್ಲಿ ಲಭ್ಯವಿದೆ.

**ಸಸ್ಯಸಂಪತ್ತು :** ತಾಲೂಕಿನ ಕಾವೇರಿ–ಕಪಿಲ ತೀರಪ್ರದೇಶದಲ್ಲಿ ವೈವಿಧ್ಯಮಯ ಗಿಡ–ಮರಗಳಿದ್ದು ನಂದಿ, ಮತ್ತಿ, ನೀಲಗಿರಿ, ತಾಳೆ, ಹಲಸು, ಮಾವು, ಬೇವು, ಹುಣಸೆ, ಅತ್ತಿ, ಆಲ, ಅರಳಿ, ಗೊಬ್ಬಲಿ ಮುಂತಾದ ಮರಗಳು ಸಮೃದ್ಧವಾಗಿವೆ. ಬೊಂಬು–ಬಿದಿರು, ಬೆತ್ತ, ಮುಂತಾದವು ಅಲ್ಲಲ್ಲಿ ಕಂಡು ಬರುತ್ತಿದ್ದು, ನಾನಾ ಬಗೆಯ ವೈವಿಧ್ಯಮಯ ಗಿಡ–ಮರ–ಬಳ್ಳಿ, ಫಲ–ಪುಷ್ಪಗಳನ್ನು ತಾಲೂಕಿನುದ್ದಗಲಕ್ಕೂ ಕಾಣಬಹುದಾಗಿದೆ.

**ಪ್ರಾಣಿಸಂಪತ್ತು :** ತಾಲೂಕಿನಲ್ಲಿ ಕ್ವಚಿತ್ತಾಗಿ ಚಿರತೆ, ನರಿ, ಕರಡಿ, ತೋಳ, ಜಿಂಕೆ, ಕಾಡುಹಂದಿ, ನಾನಾಜಾತಿಯ ಹಾವು ಮುಂತಾದ ಪ್ರಾಣಿಗಳಿವೆ. ಬೆಕ್ಕು, ನಾಯಿ, ದನ, ಎಮ್ಮೆ, ಕುದುರೆ, ಕತ್ತೆ, ಮೊಲ, ಹಂದಿ, ಕೋಳಿ, ಕುರಿ, ಆಡು, ಮೇಕೆ, ಮುಂತಾದ ಸಾಕುಪ್ರಾಣಿಗಳು ಸಾಮಾನ್ಯವಾಗಿವೆ. ಕಾಗೆ, ಗುಬ್ಬಚ್ಚಿ, ಪಾರಿವಾಳ, ಮುಂತಾದ ಪಕ್ಷಿಗಳು, ನಾನಾ ಬಗೆಯ ಚಿಟ್ಟೆಗಳು, ದುಂಬಿಗಳು ಹಾಗೂ ನಾನಾ ಜಾತಿಯ ಮೀನುಗಳೂ ತಾಲೂಕಿನಲ್ಲಿವೆ.

**ಅರಣ್ಯ ಸಂಪತ್ತು :** ಅರಣ್ಯ ಸಂಪತ್ತಿನಲ್ಲಿ ಜಿಲ್ಲೆಯು ರಾಜ್ಯದಲ್ಲಿ ಎರಡನೆಯ ಸ್ಥಾನದಲ್ಲಿದ್ದರೂ ಈ ತಾಲೂಕು ಬಹುಪಾಲು ಬಯಲು ಪ್ರದೇಶದಿಂದ ಕೂಡಿದ್ದು, ಬೆಟ್ಟಗುಡ್ಡಗಳು ವಿರಳವಾಗಿರುವುದರಿಂದ ಅರಣ್ಯವೂ ಕಡಿಮೆ ಪ್ರಮಾಣದಲ್ಲಿದೆ. ಅದೂ ಕುರುಚಲು



ಕಾಡಾಗಿದ್ದು, ದಟ್ಟವಾದ ಅರಣ್ಯಪ್ರದೇಶ ಇಲ್ಲವೆಂದೇ ಹೇಳಬಹುದು. ಆದರೂ ತಿರುಮಕೂಡಲು ನರಸೀಪುರದ ಒಂದೆರಡು ಶಾಸನಗಳಲ್ಲಿ ಅಡವಿಯ ಉಲ್ಲೇಖವಿರುವುದು ಉಲ್ಲೇಖಾರ್ಹ. ಅರಣ್ಯಗಳು ಆಯಾ ಗ್ರಾಮಗಳ ಆಸ್ತಿ ಎಂದು ೧೮೩೫ರವರೆಗೆ ಭಾವಿಸಲಾಗಿತ್ತು. ಸ್ಥಳೀಯರ ರಕ್ಷಣೆಗೊಳಪಟ್ಟಿದ್ದ ಅವುಗಳಿಗೆ ಆಗ ಹೆಚ್ಚು ಹಾನಿಯಾಗುತ್ತಿರಲಿಲ್ಲ. ಮುಂದೆ ೧೮೬೪ರಲ್ಲಿ ಅರಣ್ಯ ಇಲಾಖೆಯು ಸಂಸ್ಥಾನದಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಮರ ಕಡಿಯುವಿಕೆಯ ಮೇಲೆ ನಿಯಂತ್ರಣ ವಿಧಿಸಲಾಯಿತು. ಆದರೆ ೧೮೭೯ರಲ್ಲಿ ಅರಣ್ಯ ಇಲಾಖೆಯನ್ನು ರದ್ದುಗೊಳಿಸಿ, ಅರಣ್ಯಗಳ ಸಂರಕ್ಷಣಾ ಹೊಣೆಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಯಿತು. ತತ್ಪರಿಣಾಮವಾಗಿ ಅರಣ್ಯ ಸಂರಕ್ಷಣೆಯು ಗೊಂದಲಕ್ಕೀಡಾದುದರಿಂದ, ೧೮೮೫ರಲ್ಲಿ ಅರಣ್ಯ ಇಲಾಖೆಯನ್ನು ಪ್ರತ್ಯೇಕಪಡಿಸಿ ಪುನರ್ ರಚಿಸಲಾಯಿತು. ತೇಗದ ಮರದ ಪ್ಲಾಂಟೇಷನ್‌ಗೆ ವಿಶೇಷ ಗಮನ ನೀಡಲಾಯಿತು. ಅಲ್ಲಿಂದೀಚೆಗೆ ಅರಣ್ಯ ಇಲಾಖೆಯ ನಿಯಂತ್ರಣದಲ್ಲಿ ಅರಣ್ಯೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ.

ಉರುವಲು ಕಟ್ಟಿಗೆಯನ್ನು ಸಾರ್ವಜನಿಕರಿಗೆ ಒದಗಿಸಲು ಸರ್ಕಾರಿ ಸ್ವಾಮ್ಯದ ಸೌದೆ ಡಿಪೋಗಳು ಜಿಲ್ಲೆಯಲ್ಲಿ ಇವೆಯಾದರೂ, ತಾಲೂಕಿನಲ್ಲಿ ಇದು ಖಾಸಗಿ ವಲಯದಲ್ಲೇ ನಡೆದಿದೆ. ವಿಶ್ವಬ್ಯಾಂಕ್‌ನ ಆರ್ಥಿಕ ನೆರವಿನೊಂದಿಗೆ ಐದು ವರ್ಷದ ಸಾಮಾಜಿಕ ಅರಣ್ಯ ಯೋಜನೆಯ ಮೂಲಕ ರಾಜ್ಯದಾದ್ಯಂತ ಅರಣ್ಯೀಕರಣ ಕಾರ್ಯಕ್ರಮವನ್ನು ೧೯೮೩–೮೪ರ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಅದರಂತೆ, ಬಂಜರು, ಗೋಮಾಳ, ರಸ್ತೆ ಬದಿ, ಕೆರೆ ಕಾಲುವೆ, ಅಣೆ ದಂಡೆ, ಶಾಲಾ ಆವರಣ, ಮುಂತಾದೆಡೆ ಸಸ್ಯ ನೆಡುವ ಯೋಜನೆಯನ್ನು ಗ್ರಾಮಪಂಚಾಯಿತಿ ಹಾಗೂ ಸಾರ್ವಜನಿಕರ ನೆರವಿನೊಂದಿಗೆ ಆರಂಭಿಸಲಾಯಿತು. ಈ ಯೋಜನೆಯನ್ನು ತ್ವರಿತಗೊಳಿಸಲು ಕೈಗಾರಿಕೆಗಳಿಗೆ ಸಸಿಗಳನ್ನು ಉಚಿತವಾಗಿ ನೀಡಲಾಯಿತು. ಹೆದ್ದಾರಿಯ ಇಕ್ಕೆಲದಲ್ಲಿ ನೆರಳಿಗಾಗಿ ಸಾಲುಮರಗಳನ್ನು ಬೆಳೆಸುವ ಯೋಜನೆಯನ್ನೂ ಕೈಗೊಳ್ಳಲಾಯಿತು. ಅಲ್ಲದೇ ೧೯೮೪–೮೫ರ ಸಾಲಿನಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗಕ್ಕೆ ಸೇರಿದ ಭೂರಹಿತ ಕುಟುಂಬಗಳನ್ನು ತಾಲೂಕಿಗೆ ಮೂರರಂತೆ ಗುರುತಿಸಿ, ಪ್ರತೀಕುಟುಂಬದ ಅಧೀನಕ್ಕೆ ಎರಡು ಹೆಕ್ಟೇರು ಬಂಜರು ಭೂಮಿಯಲ್ಲಿ ಸಸಿ ನೆಟ್ಟು ಏಳು ವರ್ಷ ಕಾಲ ಪೋಷಿಸುವ ಹೊಣೆಯನ್ನು ನೀಡಲಾಯಿತು. ಅದಕ್ಕಾಗಿ ಆ ಕುಟುಂಬಗಳಿಗೆ ೨೫೦/– ರೂ.ಗಳ ಮಾಸಿಕ ಗೌರವಧನವನ್ನೂ ನೀಡಲಾಯಿತು. ವನಮಹೋತ್ಸವ ಕಾರ್ಯಕ್ರಮವನ್ನು ೧೯೮೫ರಲ್ಲಿ ಹಮ್ಮಿಕೊಳ್ಳುವ ಮೂಲಕ, ಸಸಿವೃದ್ಧಿ ಕೇಂದ್ರ (ನರ್ಸರಿ)ಗಳನ್ನು ರಾಜ್ಯದಾದ್ಯಂತ ಆರಂಭಿಸಲಾಯಿತು. ಸಾರ್ವಜನಿಕರಿಗೆ ಉಚಿತವಾಗಿ ಸಸಿಗಳನ್ನು ವಿತರಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಗ್ರಾಮೀಣ ಭೂಹೀನ ಕಾರ್ಮಿಕರಿಗೆ ನಿಶ್ಚಿತ ದುಡಿಮೆ ನೀಡುವ ಯೋಜನೆಯನ್ನು ಅರಣ್ಯೀಕರಣಕ್ಕಾಗಿ ಅರ್ಥಪೂರ್ಣವಾಗಿ ಬಳಸಿಕೊಳ್ಳಲಾಯಿತು. ತಾಲೂಕಿನಲ್ಲೂ ಅರಣ್ಯಾಭಿವೃದ್ಧಿ ಕ್ರಿಯೆಯು ನಿರಂತರವಾಗಿ ನಡೆದಿದೆ. ಅರಣ್ಯ ಇಲಾಖೆಯ ವತಿಯಿಂದ ಅರಣ್ಯಾಭಿವೃದ್ಧಿಗಾಗಿ ಸಸಿಗಳ ನೆಡುವಿಕೆ,

ನೆಡು ಸಸಿಗಳ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಗುತ್ತಿದ್ದು, ೨೦೦೮–೦೯ರ ಸಾಲಿನಲ್ಲಿ ೪,೧೬,೧೦೦ ಸಸಿಗಳನ್ನು ತಾಲೂಕಿನಲ್ಲಿ ನೆಡಲಾಗಿತ್ತು.

**ಹವಾಗುಣ :** ತಾಲೂಕಿನ ಹವಾಮಾನವು ವರ್ಷದುದ್ದಕ್ಕೂ ಸಾಧಾರಣವಾಗಿರುತ್ತದೆ. ವರ್ಷವನ್ನು ಬೇಸಿಗೆ (ಮಾರ್ಚ್–ಮೇ), ಮಳೆಗಾಲ (ಜೂನ್–ನವೆಂಬರ್) ಹಾಗೂ ಚಳಿಗಾಲ (ಡಿಸೆಂಬರ್–ಫೆಬ್ರವರಿ) ಎಂದು ವಿಂಗಡಿಸಬಹುದಾಗಿದೆ. ತಾಲೂಕಿನ ಹವಾಗುಣದ ಬಗೆ ವಿವರಗಳನ್ನು ಕೆಳಗೆ ಚರ್ಚಿಸಲಾಗಿದೆ.

**ಮಳೆ :** ತಾಲೂಕಿನಲ್ಲಿ ಬೀಳುವ ಮಳೆಯ ಹೆಚ್ಚಿನ ಭಾಗವು ನೈಋತ್ಯ ಮಾರುತವನ್ನೇ ಅವಲಂಬಿಸಿದೆ. ಸಾಮಾನ್ಯವಾಗಿ ವಾರ್ಷಿಕ ಮಳೆಯು ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಏಳು ತಿಂಗಳ ಕಾಲ ವಿಸ್ತರಿಸಿರುತ್ತದೆ. ಅದರಲ್ಲೂ ಅಕ್ಟೋಬರ್, ಅತ್ಯಂತ ಅಧಿಕ ಮಳೆಯಾಗುವ ಅವಧಿ. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಆಗುವ ಮಳೆಯು ವಾರ್ಷಿಕ ಮಳೆಯ ಶೇ. ೪೦ ರಷ್ಟು ಆಗಿದ್ದು, ಉಳಿದ ಮಳೆಯಾಗುವುದು ಅಕ್ಟೋಬರ್ ತಿಂಗಳಲ್ಲೇ. ಮುಂಗಾರು ಪೂರ್ವದ ಏಪ್ರಿಲ್–ಮೇ ತಿಂಗಳು ಹಾಗೂ ಮುಂಗಾರು ನಂತರ ನವೆಂಬರ್ ಮಾಹೆಗಳಲ್ಲಿ ಆಗುವ ಮಳೆಯು ವಾರ್ಷಿಕ ಮಳೆಯ ಶೇ. ೨೫ ರಷ್ಟು ಆಗಿರುತ್ತದೆ. ಈ ಅವಧಿಯಲ್ಲಿ ಬೀಳುವ ಮಳೆಯು ಗುಡುಗು–ಮಿಂಚುಗಳಿಂದ ಕೂಡಿರುತ್ತದೆ. ತಾಲೂಕಿನಲ್ಲಿರುವ ಮಳೆಮಾಪನ ಕೇಂದ್ರಗಳು ಕಾಲಕಾಲಕ್ಕೆ ಆಗುವ ಮಳೆಯ ಬಗೆಗೆ ಪೂರಕ ಮಾಹಿತಿಯನ್ನು ಒದಗಿಸುತ್ತವೆ. ತಾಲೂಕಿನಲ್ಲಿ ಸರಾಸರಿ ಸು.೭೧೯ ಮಿ.ಮೀ. ವಾರ್ಷಿಕ ಮಳೆಯಾಗುತ್ತದೆ. ಆದರೂ ಈ ತಾಲೂಕು ಒಮ್ಮೊಮ್ಮೆ ಬರಗಾಲಕ್ಕೆ ಈಡಾಗುತ್ತದೆ. ಹಿಂದೆ ೧೯೧೧, ೧೯೨೪, ೧೯೫೩ ಹಾಗೂ ೧೯೫೮ರ ನದಿಪ್ರವಾಹಗಳಿಂದ ಆಗಿರುವ ಹಾನಿಯನ್ನು ಇಲ್ಲಿನ ಜನ ಈಗಲೂ ನೆನಪಿಸಿಕೊಳ್ಳುತ್ತಾರೆ.

ರೈತರಿಗೆ, ಮಳೆ ನಕ್ಷತ್ರಗಳಲ್ಲಿ ಭರಣಿಯಿಂದ ಸ್ವಾತಿ ನಕ್ಷತ್ರದವರೆಗೆ ಬೀಳುವ ಮಳೆಯೇ ಉಸಿರು. ಅದರಿಂದಾಗಿ ಭರಣಿ, ಕೃತ್ತಿಕಾ, ರೋಹಿಣಿ, ಮೃಗಶಿರಾ, ಅರಿದ್ರಾ, ಪುಷ್ಯ, ಮಖಾ, ಉಬ್ಬೆ, ಉತ್ತರಾ, ಹಸ್ತ, ಚಿತ್ತಾ ಸ್ವಾತಿ ಮಳೆಗಳಿಗಾಗಿ ಜಾತಕಪಕ್ಷಿಯಂತೆ ರೈತರು ಕಾಯುತ್ತಾರೆ. ಮಳೆಯಾಗದಿದ್ದರೆ ಕಂಗಾಲಾಗುವ ರೈತರು ಹಲವಾರು ಸಾಂಪ್ರದಾಯಿಕ ಆಚರಣೆಗಳಿಗೆ ಹೊಂದಿಕೊಂಡಿದ್ದಾರೆ. ಆದರೆ ಇಂದು ಅವುಗಳನ್ನೇ ನಂಬಿ ವ್ಯವಸಾಯ ಮಾಡುವ ಪರಿಸ್ಥಿತಿ ಕ್ರಮೇಣ ಕಣ್ಮರೆಯಾಗುವ ಲಕ್ಷಣಗಳು ಒಡೆದು ಕಾಣುತ್ತಿದೆ. ತಾಲೂಕಿನಲ್ಲಿ ೧೯೦೧ರಿಂದ ೧೯೫೦ರ ಅವಧಿಯಲ್ಲಾಗಿರುವ ಸರಾಸರಿ ಮಳೆ ೭೧೯.೩ ಮಿ.ಮೀ. ಆಗಿದ್ದು, ಜಿಲ್ಲೆಯ ಸರಾಸರಿ ವಾಡಿಕೆ ಮಳೆ ಪ್ರಮಾಣ (೭೬೧.೯ ಮಿ.ಮೀ)ಕ್ಕಿಂತ ಇದು ಕಡಿಮೆ ಇತ್ತು. ತಾಲೂಕಿನಲ್ಲಿ ಅತ್ಯಂತ ಹೆಚ್ಚು ಮಳೆ ೧೯೫೭ರ ಮೇ ೨೪ರಂದು (೧೬೮.೧ ಮಿ.ಮೀ) ದಾಖಲಾಗಿದೆ.



ತಾಲೂಕಿನ ವಿವಿಧ ವೃಷ್ಟಿಮಾಪನಕೇಂದ್ರಗಳಲ್ಲಿ ಆಯ್ದ ವರ್ಷಗಳಲ್ಲಿ ದಾಖಲಾಗಿರುವ ಮಳೆ ಪ್ರಮಾಣದ ವಿವರ ಈ ಕೆಳಗಿನಂತಿದೆ.

| **ವೃಷ್ಟಿಮಾಪನ ಕೇಂದ್ರ ಹಾಗೂ ಸ್ಥಾಪಿತ ವರ್ಷ** | | **೧೯೯೧** | **೧೯೯೬** | **೨೦೦೧** | **೨೦೦೫** |
|---|---|---|---|---|---|
| ಹೊರಳಹಳ್ಳಿ | (೧೯೭೨) | ೯೭೮.೪ | ೮೦೦.೪ | ೫೮೯.೬ | ೮೭೬.೪ |
| ಮೂಗೂರು | (೧೯೭೨) | ೮೧೪.೯ | ೯೯೯.೫ | ೫೮೮.೬ | ೯೫೧.೨ |
| ನರಸೀಪುರ | (೧೯೦೧) | ೧೦೧೨.೨ | ೮೪೦.೨ | ೫೯೩.೨ | ೧೦೯೧.೪ |
| ಕಬಿನಿಕಚೇರಿ | (೧೯೯೧) | ದುರಸ್ತಿ | ೪೧೬.೯ | ೬೦೩.೮ | ೧೧೦೮.೮ |
| ತಲಕಾಡು | (೧೯೭೩) | ೯೬೮.೫ | ೭೭೮.೧ | ೬೦೫.೦ | ೧೧೩೫.೪ |
| ಹುಣಸೂರು | (೧೯೯೮) | – | – | ೫೮೬.೦ | ೧೦೪೬.೨ |
| ಬನ್ನೂರು | (೧೯೬೦) | ೯೬೫.೪ | ೯೫೨.೬ | ದುರಸ್ತಿ | ೧೨೩೫.೨ |

ನರಸೀಪುರದ ವೃಷ್ಟಿಮಾಪನ ಕೇಂದ್ರದಲ್ಲಿ ೧೯೦೧ ರಿಂದ ೧೯೫೦ರವರೆಗೆ ದಾಖಲಾಗಿರುವಂತೆ ೪೬ ವಿವಿಧ ದಿನಗಳಲ್ಲಿ ಸರಾಸರಿ ೭೧೫ ಮಿ.ಮೀ. ವಾರ್ಷಿಕ ಮಳೆಯಾಗಿದೆ. ಆ ಪ್ರಕಾರ ಸಾಮಾನ್ಯವಾಗಿ ಮೇ ಹಾಗೂ ಅಕ್ಟೋಬರ್ ತಿಂಗಳಲ್ಲಿ ಅತ್ಯಧಿಕ ಮಳೆಯಾಗಿರುವ ಅಂಶವು ಸ್ಪಷ್ಟವಾಗುತ್ತದೆ. ಅಲ್ಲದೇ ಮುಂಗಾರು ಪೂರ್ವ ಹಾಗೂ ಮುಂಗಾರು ನಂತರದ ಮಾಹೆಗಳಲ್ಲಿ ಅತೀ ಕಡಿಮೆ ಮಳೆಯಾಗಿರುವ ಅಂಶವೂ ವೇದ್ಯವಾಗುತ್ತದೆ. ಒಟ್ಟಾರೆ ಮುಂಗಾರು ಅವಧಿಯಲ್ಲಾಗಿರುವ ಮಳೆಯು ಮೇ ಹಾಗೂ ಅಕ್ಟೋಬರ್ ತಿಂಗಳುಗಳಲ್ಲಿ ಆಗಿರುವ ಮಳೆಗೆ ಹೆಚ್ಚು ಕಡಿಮೆ ಸಮನಾಗಿರುವ ಅಂಶ ಗಮನಾರ್ಹವಾಗಿದೆ. ೧೯೦೩ನೇ ಸಾಲಿನಲ್ಲಿ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ಶೇ. ೧೭೭ ರಷ್ಟು ಅಧಿಕವಾಗಿದ್ದರೆ ೧೯೨೩ರ ಸಾಲಿನಲ್ಲಿ ಕೇವಲ ಶೇ. ೫೫ ರಷ್ಟು ಮಾತ್ರ ವಾರ್ಷಿಕ ಸರಾಸರಿ ಮಳೆಯಾಗಿತ್ತೆಂದು ತಿಳಿದುಬರುತ್ತದೆ. ೧೯೪೧ – ೧೯೯೦ರ ಅವಧಿಯಲ್ಲಿ ತಾಲೂಕಿನ ಸರಾಸರಿ ವಾಡಿಕೆ ಮಳೆ ಪ್ರಮಾಣವು ೭೧೨ ಮಿ.ಮೀ ಇದ್ದು ಜಿಲ್ಲಾ ಪ್ರಮಾಣವು ೭೬೭ ಮಿ.ಮೀ ಆಗಿತ್ತು. ೧೯೭೯ರ ಸಾಲಿನಲ್ಲಿ ತಾಲೂಕಿನ ಬನ್ನೂರು ಹಾಗೂ ಮೂಗೂರುಗಳಲ್ಲಿ ಅತ್ಯಧಿಕ ಮಳೆ ದಾಖಲಾಗಿದೆ. ೨೦೦೧ರಲ್ಲಿ ಅತ್ಯಂತ ಕಡಿಮೆ ಮಳೆ ದಾಖಲಾಗಿದ್ದರೆ, ೨೦೦೫ರಲ್ಲಿ ಅತ್ಯಧಿಕ ಮಳೆ ದಾಖಲಾಗಿರುವುದು ಹಿಂದಿನ ಕೋಷ್ಟಕದಿಂದ ವೇದ್ಯವಾಗುತ್ತದೆ. ೨೦೦೭ರಲ್ಲಿ ೬೧೪ ಮಿ.ಮೀ. ವಾಸ್ತವಿಕ ಮಳೆಯಾಗಿದ್ದರೆ, ೨೦೦೯ರಲ್ಲಿ ೭೭೦.೪ ಮಿ.ಮೀ. ವಾಸ್ತವಿಕ ಮಳೆಯಾಗಿತ್ತು. ಆ ಸಾಲಿನಲ್ಲಿ ತಾಲೂಕಿನಲ್ಲಿ ಆರು ವೃಷ್ಟಿಮಾಪನ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದವು.

**ಉಷ್ಣಾಂಶ :** ಜಿಲ್ಲಾ ಕೇಂದ್ರ ಮೈಸೂರಿನಲ್ಲಿ ಉಷ್ಣಾಂಶ ಮಾಪನ ವೀಕ್ಷಣಾಲಯವಿದೆ. ಅದರಂತೆ ಜಿಲ್ಲೆಯ ಇತರ ಭಾಗಗಳಲ್ಲಿರುವಂತೆ ತಾಲೂಕಿನಲ್ಲೂ ಮಾರ್ಚ್ ತಿಂಗಳಿನಿಂದ ಮೇ ತಿಂಗಳವರೆಗೆ ಉಷ್ಣಾಂಶದಲ್ಲಿ ನಿರಂತರ ಏರಿಕೆ ಇರುತ್ತದೆ. ಏಪ್ರಿಲ್ ಮಾಹೆ ಅಧಿಕ ಉಷ್ಣಾಂಶದ ಅವಧಿಯಾಗಿದ್ದು, ಆಗ ೩೪° ಸೆ. ಗರಿಷ್ಟ ಉಷ್ಣಾಂಶವಿದ್ದರೆ, ೨೧.೪°ಸೆ ಕನಿಷ್ಟ ಉಷ್ಣಾಂಶವಿರುತ್ತದೆ. ಬೇಸಿಗೆಯಲ್ಲಿ ಕೆಲವೊಮ್ಮೆ ದಿನದ ಉಷ್ಣಾಂಶವು ೩೯°ಸೆ ಇರುತ್ತದೆ. ನೈರುತ್ಯ ಮುಂಗಾರಿನ ಆಗಮನಕ್ಕೆ ಪೂರ್ವದಲ್ಲಿ ಏಪ್ರಿಲ್ ಹಾಗೂ ಮೇ ತಿಂಗಳುಗಳಲ್ಲಿ ಗುಡುಗಿನಿಂದ ಕೂಡಿದ ಮಳೆಯಿಂದಾಗಿ ಉಷ್ಣಾಂಶವು ತಹಬದಿಗೆ ಬರುತ್ತದೆ. ಜೂನ್ ವೇಳೆಗೆ ದಿನದ ಉಷ್ಣಾಂಶದಲ್ಲಿ ಗಣನೀಯ ಕುಸಿತವುಂಟಾಗಿ ಮಾನ್‌ಸೂನ್ ಅವಧಿಯಲ್ಲಿ ಹವೆಯು ಹಿತಕರವಾಗಿದ್ದು, ಆಹ್ಲಾದವನ್ನುಂಟು ಮಾಡುತ್ತದೆ. ನವೆಂಬರ್ ಮಧ್ಯಭಾಗದಿಂದ ಹಗಲು–ರಾತ್ರಿಗಳೆರಡರಲ್ಲೂ ಉಷ್ಣಾಂಶದಲ್ಲಿ ನಿರಂತರ ಇಳಿಕೆಯಾಗುತ್ತದೆ. ಡಿಸೆಂಬರ್ ತಿಂಗಳು ಅತ್ಯಂತ ಚಳಿಯಿಂದ ಕೂಡಿರುತ್ತಿದ್ದು, ಆಗ ಗರಿಷ್ಟ ಉಷ್ಣಾಂಶವು ೨೭°ಸೆ ಇದ್ದರೆ ಕನಿಷ್ಟ ಉಷ್ಣಾಂಶವು ೧೬.೫°ಸೆ ಇರುತ್ತದೆ. ಡಿಸೆಂಬರ್–ಜನವರಿ ತಿಂಗಳುಗಳಲ್ಲಿ ಕೆಲವೊಮ್ಮೆ ಉಷ್ಣಾಂಶವು ೧೧°ಸೆ ಗೆ ಇಳಿದಿರುವುದೂ ಉಂಟು.

**ಸಾಪೇಕ್ಷ ಆರ್ದ್ರತೆ :** ನೈಋತ್ಯ ಮಾನ್‌ಸೂನ್ ಅವಧಿಯಲ್ಲಿ ಸಾಪೇಕ್ಷ ಆರ್ದ್ರತೆಯು ಸಾಮಾನ್ಯವಾಗಿ ಅಧಿಕವಾಗಿರುತ್ತದೆ. ಬೆಳಗಿನ ಸಮಯದಲ್ಲಿ ಶೇ. ೨೦ ಆರ್ದ್ರತೆಯು ಇದ್ದರೆ, ಮಧ್ಯಾಹ್ನದ ಅವಧಿಯಲ್ಲಿ ಇನ್ನೂ ಕಡಿಮೆ ಇರುತ್ತದೆ. ಜನವರಿ ಯಿಂದ ಏಪ್ರಿಲ್‌ವರೆಗೆ ಆರ್ದ್ರತೆಯು ಕೇವಲ ಶೇ. ೨೦ ಇದ್ದು, ವಾತಾವರಣವು ಒಣಹವೆಯಿಂದ ಕೂಡಿರುತ್ತದೆ.

**ಮೋಡ :** ನೈಋತ್ಯ ಮಾನ್‌ಸೂನ್ ಅವಧಿಯಲ್ಲಿ ಮುಗಿಲಿನಲ್ಲಿ ದಟ್ಟವಾದ ಮೋಡಗಳು ಆವರಿಸಿರುತ್ತವೆ. ಆನಂತರದಲ್ಲಿ ಮೋಡಗಳು ತೆಳುವಾಗಿ ಮುಗಿಲಲ್ಲಿ ಕಾಣಸಿಗುತ್ತವೆ. ಉಳಿದಂತೆ ವರ್ಷದ ಇತರ ಅವಧಿಯಲ್ಲಿ ಮುಗಿಲು ಸ್ವಚ್ಛವಾಗಿರುತ್ತದೆ, ಇಲ್ಲವೇ ಮೋಡಗಳು ವಿರಳವಾಗಿ ಕಾಣಸಿಗುತ್ತವೆ. ಬೇಸಿಗೆಯ ದಿನಗಳಲ್ಲಿ ಹಾಗೂ ಮಾನ್‌ಸೂನ್ ನಂತರದ ಕಾಲಾವಧಿಯಲ್ಲಿ ಮಧ್ಯಾಹ್ನದ ವೇಳೆಯಲ್ಲೂ ಮೋಡ ಮುಸುಕಿದ ಮುಗಿಲನ್ನು ನೋಡಬಹುದಾಗಿದೆ.

**ಗಾಳಿ :** ಸಾಮಾನ್ಯವಾಗಿ ಗಾಳಿಯ ಚಲನೆಯು ಸೌಮ್ಯವಾಗಿರುತ್ತದೆ. ಆದರೆ ನೈಋತ್ಯ ಮಾನ್‌ಸೂನ್ ಅವಧಿಯಲ್ಲಿ ವೇಗವಾಗಿ ಬೀಸುವುದುಂಟು. ಮೇ–ಸೆಪ್ಟೆಂಬರ್ ಅವಧಿಯಲ್ಲಿ ಗಾಳಿಯು ಪಶ್ಚಿಮಾಭಿಮುಖವಾಗಿ ಇಲ್ಲವೇ ನೈಋತ್ಯಮುಖವಾಗಿ ಬೀಸುತ್ತದೆ. ಅಕ್ಟೋಬರ್ ತಿಂಗಳಿನಿಂದ ಈಶಾನ್ಯ ಇಲ್ಲವೇ ಪೂರ್ವಾಭಿಮುಖವಾಗಿ ಬೀಸಲಾರಂಭಿಸುವ ಗಾಳಿಯು ಮುಂದಿನ ನಾಲ್ಕು ತಿಂಗಳ (ಫೆಬ್ರವರಿ)ವರೆಗೆ ತೀವ್ರವಾಗಿರುತ್ತದೆ. ಮಾರ್ಚ್–ಏಪ್ರಿಲ್ ತಿಂಗಳುಗಳಲ್ಲಿ ಗಾಳಿಯ ಚಲನೆಯು ಬೆಳಗಿನ ಅವಧಿಯಲ್ಲಿ ಸಾಮಾನ್ಯವಾಗಿ ನೈಋತ್ಯ ಇಲ್ಲವೇ ಪಶ್ಚಿಮಾಭಿಮುಖವಾಗಿದ್ದರೆ, ಮಧ್ಯಾಹ್ನವಾಗುತ್ತಿದ್ದಂತೆ ಈಶಾನ್ಯ



ದಿಕ್ಕಿನತ್ತ ಬೀಸಲಾರಂಭಿಸುತ್ತದೆ. ಅಕ್ಟೋಬರ್ ಹಾಗೂ ನವೆಂಬರ್ ತಿಂಗಳುಗಳಲ್ಲಿ ಬಂಗಾಳಕೊಲ್ಲಿಯಲ್ಲಿ ವಾಯುಭಾರದಿಂದಾಗಿ ಉಂಟಾಗುವ ಚಂಡಮಾರುತವು ಪೂರ್ವತೀರವನ್ನು ದಾಟಿ ಪಶ್ಚಿಮಾಭಿಮುಖವಾಗಿ ದಕ್ಷಿಣ ಭಾರತದತ್ತ ವೇಗವಾಗಿ ಧಾವಿಸುತ್ತವೆ. ಆಗ ಬಿರುಗಾಳಿ ಹಾಗೂ ಗುಡುಗು ಮಿಂಚುಗಳಿಂದ ಕೂಡಿದ ಭಾರಿ ಮಳೆಯಾಗುವುದು ಸಾಮಾನ್ಯ. ತಾಲೂಕಿನಲ್ಲಾಗುವ ಮಳೆ ಹಾಗೂ ಕಾಣಸಿಗುವ ಹವಾಗುಣಗಳೆರಡೂ ಕೃಷಿಯಲ್ಲಿ ತೊಡಗಿರುವವರಿಗೆ ಹೇಳಿಮಾಡಿಸಿದ್ದಾಗಿದೆ. ಕಾವೇರಿ ಹಾಗೂ ಕಪಿಲ ನದಿಗಳು ಉಂಟು ಮಾಡುವ ಪ್ರವಾಹದಿಂದಾಗಿ, ತಾಲೂಕು ಕೇಂದ್ರ ನರಸೀಪುರ, ತಿರುಮಕೂಡಲು ಸೇರಿದಂತೆ ಹೊಳೆಸಾಲಿನ ಊರು–ಪಟ್ಟಣಗಳಿಗೆ ನೆರೆಹಾವಳಿಯ ಭೀತಿಯುಂಟಾದರೆ, ಗದ್ದೆಗಳಿಗೆ ನೀರು ನುಗ್ಗಿ ಬೆಳೆ ಹಾಳಾಗುತ್ತದೆ.

**ಪರಿಸರ ಮಾಲಿನ್ಯ :** ಕೈಗಾರಿಕಾ ದೃಷ್ಟಿಯಿಂದ ಈ ತಾಲೂಕನ್ನು ಅತೀ ಹಿಂದುಳಿದಿರುವ ಕೈಗಾರಿಕಾ ವಲಯ–I ಕ್ಕೆ ಸೇರಿದ ಪ್ರದೇಶವೆಂದು ಪರಿಗಣಿಸಲಾಗಿದ್ದು, ರಾಜ್ಯ ಸರ್ಕಾರವು ಕೈಗಾರಿಕಾಭಿವೃದ್ಧಿಗಾಗಿ ಸಾಕಷ್ಟು ಪ್ರೋತ್ಸಾಹ ನೀಡುತ್ತಿದೆ. ಕೈಗಾರಿಕೆಗಳಿಂದ ಉಂಟಾಗುವ ಪರಿಸರ ಮಾಲಿನ್ಯ ಹಾಗೂ ಪಟ್ಟಣಗಳಿಂದ ಬರುವ ಕೊಳಚೆ ನೀರುಗಳಿಂದ ನದಿಗಳು ಕಲುಷಿತವಾಗುವುದನ್ನು ನಿಯಂತ್ರಿಸಲು ಸರ್ಕಾರವು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಲಿಯನ್ನು ಸ್ಥಾಪಿಸಿದೆ. ನದಿಯ ದಂಡೆ ಮೇಲಿರುವ ಪಟ್ಟಣಗಳಿಂದ ಬಂದು ಸೇರುವ ಕೊಳಚೆ ನೀರಿನಿಂದಾಗಿ ಹೆಚ್ಚು ಮಾಲಿನ್ಯ ಉಂಟಾಗುತ್ತದೆಂಬ ಅಭಿಪ್ರಾಯವಿದೆ. ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾವೇರಿ ಮತ್ತದರ ಉಪನದಿಗಳ ನೈರ್ಮಲ್ಯತೆಯನ್ನು ತಿಂಗಳಿಗೊಮ್ಮೆ ಪರೀಕ್ಷಿಸುವ ವ್ಯವಸ್ಥೆಯನ್ನು ನಂಜನಗೂಡು ಹಾಗೂ ಸತ್ತೇಗಾಲ ಸೇತುವೆ ಬಳಿ ಮಾಡಿದ್ದು, ಕಾವೇರಿ ನೀರು 'ಸಿ' ವರ್ಗದ ಗುಣಮಟ್ಟ ಹೊಂದಿರುವ ಅಂಶವನ್ನು ಬಹಳ ಹಿಂದೆಯೇ ವ್ಯಕ್ತಪಡಿಸಿದೆ. ಈ ನಿಟ್ಟಿನಲ್ಲಿ ಮಂಡಳಿಯು ಈಗಾಗಲೇ ಕಾರ್ಯಮಗ್ನವಾಗಿದೆ. ವಾಯುಮಾಲಿನ್ಯ ನಿಯಂತ್ರಣಕ್ಕೆ ಸಾರಿಗೆ ಇಲಾಖೆಯೂ ಕ್ರಮ ತೆಗೆದುಕೊಂಡಿದೆ. ತಾಲೂಕಿನ ಹೆಮ್ಮಿಗೆ ಬಳಿ ಖಾಸಗಿ ಒಡೆತನದ ಬೋರುವಾ ವಿದ್ಯುತ್ ನಿಗಮವು ಇದ್ದರೂ ಅದರಿಂದ ಕಾವೇರಿ ನದಿ ಕಲುಷಿತಗೊಂಡಿರುವ ಬಗ್ಗೆ ವರದಿ ಲಭ್ಯವಿಲ್ಲ. ಬನ್ನೂರು ಹಾಗೂ ನರಸೀಪುರದ ಸುತ್ತಮುತ್ತ ಸಣ್ಣಪುಟ್ಟ ಕೈಗಾರಿಕೆ ಹಾಗೂ ಅಕ್ಕಿಗಿರಣಿಗಳಿದ್ದು, ಅಲ್ಪಸ್ವಲ್ಪ ವಾಯುಮಾಲಿನ್ಯವಾಗುತ್ತದೆಂದು ಹೇಳಲಾಗುತ್ತದೆ. ಆದರೂ ಕೈಗಾರಿಕೋದ್ಯಮವು ಅಷ್ಟಾಗಿ ಬೆಳೆದಿಲ್ಲದಿರುವುದರಿಂದ ತಾಲೂಕಿನ ಪರಿಸರವು ಅಷ್ಟಾಗಿ ಕಲುಷಿತಗೊಂಡಿಲ್ಲವೆಂದು ಹೇಳಲಾಗುತ್ತದೆ.